Noothana Balavyakarana—Kann[...]
For Secondary Schools

ನೂತನ
ಬಾಲ ವ್ಯಾಕರಣ

ಒರೆದವರು:
ಉಗ್ರಾಣ ಮಂಗೇಶ ರಾವ್,
ಪುತ್ತೂರು

1950

[ಬೆಲೆ: ೧೦ ಆಣೆ.

ಪ್ರಕಾಶಕರು:

ಬಾಳಿಗಾ ಎಂಡ್ ಸನ್ಸ, ಮಂಗಳೂರು

First Edition May 1949.
Reprinted June 1949, 1950.

PRINTED AT THE BASEL MISSION PRESS, MANGALORE, S.K.

ಪ್ರಕಾಶಕರ ಮುನ್ನುಡಿ

ಕನ್ನಡ ಸಾಹಿತ್ಯಕ್ಷೇತ್ರದಲ್ಲಿ ಕಳೆದ ಮೂವತ್ತು ನಾಲ್ವತ್ತು ವರ್ಷಗಳಿಂದ ದುಡಿಯುತ್ತಿದ್ದು, ಭಾಷಾ ಶಿಕ್ಷಣದಲ್ಲಿ ನುರಿತ, ಶ್ರೀ ಉಗ್ರಾಣ ಮಂಗೇಶರಾಯರು ಬರೆದ ಎರಡು ವ್ಯಾಕರಣ ಪುಸ್ತಕಗಳನ್ನು ಪ್ರಕಾಶಿಸಲು ನಾವು ಸಂತೋಷಪಡುತ್ತೇವೆ.

ಪ್ರಾದೇಶಿಕ ಭಾಷೆಗೆ ಹೆಚ್ಚಿನ ಪ್ರಾಶಸ್ತ್ಯ ಕೊಟ್ಟು ಸರಕಾರದವರು ಇತ್ತೀಚೆಗೆ ಮಂಜೂರುಮಾಡಿದ ಸೆಕೆಂಡರಿ ಶಾಲೆಗಳ ಪಾಠಪಟ್ಟಿಯನ್ನು ಈ ಪುಸ್ತಕಗಳನ್ನು ಬರೆಯುವಲ್ಲಿ ಲಕ್ಷ್ಯದಲ್ಲಿಟ್ಟುಕೊಂಡರೂ ವ್ಯಾಕರಣದ ಶುಷ್ಕತೆಯನ್ನೊ ಅಂಜಿಕೆಯನ್ನೊ, ಹೆಚ್ಚಿಸುವ ಹಳೆ ಪದ್ಧತಿಯಲ್ಲಿ ಬರೆಯದೆ, ವಿದ್ಯಾರ್ಥಿಗಳ ಲಕ್ಷ್ಯವು ಭಾಷೆಯ ಕಡೆಗೆ ಹರಿದು, ವ್ಯಾಕರಣದ ನಿಯಮಗಳು ಅವರಲ್ಲಿ ಮಂದಟ್ಟಾಗುವಂತೆ ಉಚಿತ ಮತ್ತು ಸುಂದರವಾದ ಉದಾಹರಣೆಗಳನ್ನು ಕೊಟ್ಟು ಲೇಖಕರು ಕೈಕೊಂಡ ವಿಷಯನಿರೂಪಣೆ ಉತ್ತಮ ಕ್ರಮವು ಈ ಎರಡು ಪುಸ್ತಕಗಳ ವೈಶಿಷ್ಟ್ಯ.

ಸೆಕೆಂಡರಿ ಮತ್ತು ಹೈಸ್ಕೂಲು ವಿದ್ಯಾರ್ಥಿಗಳಿಗೆ ಈ ಎರಡೂ ಪುಸ್ತಕಗಳಿಂದ ವಿಶೇಷ ಲಾಭವಿದೆ ಎಂದು ನಮ್ಮ ನಂಬುಗೆ. ಇದು ಸಫಲವಾಯಿತೆಂದರೆ ನಾವು ಕೃತಾರ್ಥರು.

ಮಂಗಳೂರು,
೨೦—೫—೧೯೫೯.

ಪ್ರಕಾಶಕರು

ವಿಷಯಸೂಚಿ

ನೂತನ

ಬಾಲವ್ಯಾಕರಣ

ಒಂದನೆಯ ಅಧ್ಯಾಯ

ನುಡಿಗನ್ನಡ

ಒಂದು ನಾಡಿನ ಬಹು ಜನರು ಆಡುವ ಭಾಷೆ ಆ ನಾಡಿನ ಭಾಷೆ ಎನ್ನಿಸುವುದು. ಕನ್ನಡವು ಕನ್ನಡ ನಾಡಿನ ಭಾಷೆ. ಕನ್ನಡಿಗರು ಆ ಭಾಷೆಯನ್ನು ಬಹುಕಾಲದಿಂದ ಆಡುತ್ತಿದ್ದು ಆ ಭಾಷೆಯಲ್ಲಿ ಹೇರಳ ಗ್ರಂಥಗಳನ್ನು ಬರೆದು ಅದನ್ನು ಆ ದೇಶದ ಒಂದು ಗಣ್ಯಭಾಷೆಯನ್ನಾಗಿ ಮಾಡಿರುವರು.

ಪ್ರಾರಂಭದಲ್ಲಿ ಇತರ ಭಾಷೆಗಳಂತೆ ಕನ್ನಡವು ಆಡುವ ಭಾಷೆ ಮಾತ್ರ ಆಗಿತ್ತು. ಆಗ ಅದನ್ನು ಬರೆಯುವುದಕ್ಕೆ ಲಿಪಿ, ಎಂದರೆ ಅಕ್ಷರಸಂಜ್ಞೆಗಳು ಇರಲಿಲ್ಲ. ಅಂದಮೇಲೆ ಗ್ರಂಥಗಳೂ ಇರಲಿಲ್ಲ.

ಕ್ರಮೇಣ ಬರವಣಿಗೆಯ ಅವಶ್ಯವು ತಲೆದೋರಿತು. ಭಾಷೆಯಲ್ಲಿ ಉಚ್ಚಾರ ಮಾಡುವ ಅಕ್ಷರಗಳಿಗೆ ಬರೆಯುವ ಸಂಜ್ಞೆಗಳನ್ನು ರೂಪಿಸಿದರು. ಬರೆಯುವ ಸಾಧನವಾದ ಮೇಲೆ ಬರವಣಿಗೆ ಬೆಳೆಯಲಾರಂಭಿಸಿತು. ಗ್ರಂಥಗಳೂ ಆದುವು.

ಆಗ ಪದಗಳ ರೂಪ, ಅವುಗಳ ಉಪಯೋಗ, ಮಾತುಗಳ ಕ್ರಮ, ಭಾಷಾಪದ್ಧತಿ, ಇವುಗಳಲ್ಲಿ ಹಿರಿಯರ ಮಾರ್ಗವನ್ನು ಅನುಸರಿಸುವುದು ಯೋಗ್ಯವೆಂದು ಭಾಷೆಗೆ ತಕ್ಕ ಕಟ್ಟುಕಟ್ಟಳೆಗಳನ್ನು ಮಾಡಿದರು. ಇವೇ ಆ ಭಾಷೆಯ ವ್ಯಾಕರಣವು.

ಈ ಕಟ್ಟುಕಟ್ಟಳೆಗಳು ಬರೆಯುವ ಭಾಷೆಗೆ; ಆಡುವ ಭಾಷೆಗೆ ಅಲ್ಲ. ಆಡುವ ಭಾಷೆ ತನ್ನ ದಾರಿಯನ್ನು ಹಿಡಿದು ಮುಂದುವರಿಯು

ತ್ತಲೇ ಇರುತ್ತದೆ. ವ್ಯಾಕರಣವು ಅದನ್ನು ಅನುಸರಿಸಿ ಹೊಸ ಕಟ್ಟು ಕಟ್ಟಳೆಗಳನ್ನು ಮತ್ತೆ ಮಾಡುವುದು.

ಕನ್ನಡಕ್ಕೆ ವ್ಯಾಕರಣವನ್ನು ರಚಿಸುವಾಗ ಸಂಸ್ಕೃತವ್ಯಾಕರಣವನ್ನು ಮಾದರಿಯಾಗಿ ಇಟ್ಟುಕೊಂಡಂತೆ ಕಾಣುತ್ತದೆ. ಸಂಸ್ಕೃತವು ಕನ್ನಡಕ್ಕೆ ಹಿರಿಯಕ್ಕನಂತಿದ್ದು ಆ ಭಾಷೆಯ ಬಹುಶಬ್ದಗಳು ಕನ್ನಡದಲ್ಲಿ ಬಳಕೆಯಲ್ಲಿರುವುದರಿಂದ ಸಂಸ್ಕೃತ ವ್ಯಾಕರಣದ ಅನುಕರಣವು ಒಂದು ರೀತಿಯಲ್ಲಿ ಅಗತ್ಯವಾಯಿತು.

ಅಕ್ಷರಮಾಲೆ

ಭಾಷೆ ಮಾತುಗಳಿಂದ ಕೂಡಿದೆ. ಮಾತುಗಳು ಪದಗಳಿಂದ ಕೂಡಿವೆ. ಪದಗಳು ಅಕ್ಷರಗಳಿಂದ ಕೂಡಿವೆ. ಅಕ್ಷರಗಳಿಗೆ ವರ್ಣವೆಂದೂ ಹೆಸರುಂಟು.

ಮಾತುಗಳು ಕಿವಿಯ ಮೇಲೆ ಬೀಳುವುವು. ಕಿವಿಗೆ ಕೇಳುವ ಶಕ್ತಿ ಸಹಜವಾಗಿರುವುದರಿಂದ ಇವು ಮನಸ್ಸಿಗೆ ಗೊತ್ತಾಗಿ ಬುದ್ಧಿಯಲ್ಲಿ ನಿಲ್ಲುವುವು. ತಿಳಿಯುವ ಶಕ್ತಿ ಬಂದೊಡನೆ ಶಿಶು ಕೇಳಿದ ಮಾತುಗಳನ್ನು ನೆನಪಿಗೆ ತಂದುಕೊಂಡು 'ಅಮ್ಮ', 'ಅಪ್ಪ' ಎಂದು ಆಡಲು ಕಲಿಯುವುದು. ಕೆಲವು ವರ್ಷಗಳ ಅನಂತರ ಅದಕ್ಕೆ ಅಕ್ಷರಾಭ್ಯಾಸ ಮಾಡಿಸುವರು.

ಭಾಷೆಯ ಅಭ್ಯಾಸಕ್ಕೆ ಪ್ರಾರಂಭದಲ್ಲಿ ಅಕ್ಷರಜ್ಞಾನವು ಅಗತ್ಯ. ಕನ್ನಡ ಭಾಷೆಗೆ ಅಕ್ಷರಮಾಲೆಯನ್ನು ಮಾಡುವಾಗ ಕನ್ನಡ ಶಬ್ದಗಳಿಗೂ ಸಂಸ್ಕೃತ ಶಬ್ದಗಳಿಗೂ ಅಗತ್ಯವಾದ ಅಕ್ಷರಸಂಜ್ಞೆಗಳನ್ನು ಮಾಡಿರುವರು.

ಅಕ್ಷರಗಳಲ್ಲಿ **ಸ್ವರಗಳೆಂದೂ ವ್ಯಂಜನಗಳೆಂದೂ** ಎರಡು ವಿಧಗಳಿವೆ.

ಕನ್ನಡದಲ್ಲಿ ಸ್ವರಾಕ್ಷರಗಳು:—

ಅ ಆ, ಇ ಈ, ಉ ಊ, ಋ, ಎ ಏ ಐ, ಒ ಓ ಔ. ಸಂಸ್ಕೃತ ಭಾಷೆಯ ಅಕ್ಷರಗಳಿಗೆಲ್ಲ ಕನ್ನಡ ಸಂಜ್ಞೆಗಳನ್ನು ಮಾಡಿರುವುದರಿಂದ ಸ್ವರಮಾಲೆಯಲ್ಲಿ ೠ ಌ ೡಗಳನ್ನೂ ಸೇರಿಸುವುದುಂಟು; ಆದರೆ ಅವು ಕನ್ನಡದಲ್ಲಿ ಎಂದೂ ಉಪಯೋಗವಾಗತಕ್ಕವುಗಳಲ್ಲವಾದುದರಿಂದ ಅವನ್ನು ಇಲ್ಲಿ ಸೇರಿಸಲಿಲ್ಲ.

ಸ್ವರಗಳಲ್ಲಿ ಉಚ್ಚಾರಭೇದದಿಂದ ಎರಡು ರೀತಿ ಇವೆ. ಗಿಡ್ಡವಾಗಿ ಉಚ್ಚಾರವಾಗುವವುಗಳು ಹ್ರಸ್ವಗಳು; ಉದ್ದವಾಗಿ ಉಚ್ಚಾರವಾಗುವವುಗಳು ದೀರ್ಘಗಳು.

ಹ್ರಸ್ವಗಳು:— ಅ ಇ ಉ ಋ ಎ ಒ.
ದೀರ್ಘಗಳು:— ಆ ಈ ಊ ಏ ಐ ಓ ಔ.

ವ್ಯಂಜನಗಳಲ್ಲಿ ಉಚ್ಚಾರಣೆಗೆ ತಕ್ಕಂತೆ ವರ್ಗಗಳಾಗಿ ಕೂಡತಕ್ಕವು, ಈ ವರ್ಗಗಳಿಗೆ ಕೂಡದೆ ಇರತಕ್ಕವುಗಳೆಂದು ಎರಡು ವಿಧ. ಇವುಗಳನ್ನು ವರ್ಗೀಯಗಳೆಂದೂ ಅವರ್ಗೀಯಗಳೆಂದೂ ಕರೆಯುವರು.

ವರ್ಗೀಯಗಳು:—

ಕ್	ಖ್	ಗ್	ಘ್	ಙ್
ಚ್	ಛ್	ಜ್	ಝ್	ಞ್
ಟ್	ಠ್	ಡ್	ಢ್	ಣ್
ತ್	ಥ್	ದ್	ಧ್	ನ್
ಪ್	ಫ್	ಬ್	ಭ್	ಮ್

ಅವರ್ಗೀಯಗಳು:—

ಯ್ ರ್ ಲ್ ವ್ ಶ್ ಷ್ ಸ್ ಹ್ ಳ್

ಇವಲ್ಲದೆ ಅನುಸ್ವಾರ ಂ ಮತ್ತು ವಿಸರ್ಗ ಃ ಎಂಬ ಎರಡು ಅಕ್ಷರಗಳೂ ಇವೆ. ಇವುಗಳನ್ನು ಯೋಗವಾಹಗಳೆನ್ನುವರು.

ಸ್ವರವನ್ನು ಅನುಸರಿಸಿಯೇ ಇವಕ್ಕೆ ಉಚ್ಚಾರವಾದುದರಿಂದ ಯೋಗವಾಹಗಳೆಂದು ಹೆಸರು. ಅನುಸ್ವಾರವನ್ನು ಸೊನ್ನೆ, ಬಿಂದು ಎಂದೂ ಹೇಳುವರು.

ಉದಾ:— ಅಂ, ಇಂ, ಕುಂ, ಮಂ ಇತ್ಯಾದಿ.

ವಿಸರ್ಗದ ಉಚ್ಚಾರವು ಹ್ ದ ಉಚ್ಚಾರದಂತಿರುವುದು. ಅದನ್ನು ಉಚ್ಚರಿಸುವಾಗ ಉಸಿರನ್ನು ಬಲವಾಗಿ ಹೊರಗೆ ಬಿಡ ಬೇಕಾಗುವುದರಿಂದ ಅದಕ್ಕೆ ವಿಸರ್ಗವೆಂದು ಹೆಸರು.

ಉದಾ:— ಅಃ, ಉಃ, ನಃ, ತಃ ಇತ್ಯಾದಿ.

ಇವುಗಳು ಸ್ವರಗಳೊಡನೆ ಹೋಗುವುದರಿಂದ ಅವನ್ನು ಸ್ವರ ಮಾಲೆಯ ಕೊನೆಗೆ ಅಂ ಅಃ ಎಂದು ಸೇರಿಸುವ ವಾಡಿಕೆ ಇದೆ.

ಕನ್ನಡದಲ್ಲಿ ಮೇಲೆ ಹೇಳಿದ ಅಕ್ಷರಗಳಲ್ಲದೆ ಹಳಗನ್ನಡದ ಲ್ಲಿದ್ದು ಈಗ ಬಳಕೆಯಲ್ಲಿ ಇಲ್ಲದ ಱ ೞ ಎಂಬ ಅಕ್ಷರಗಳೂ ಅವೆ. ಹೀಗೆ ಕನ್ನಡ ಸ್ವರಗಳು ೧೪, ವ್ಯಂಜನಗಳು ೨೫+೯, ಯೋಗವಾಹ ಗಳು ೨, ಹಳಗನ್ನಡದಲ್ಲಿ ಮಾತ್ರ ಉಪಯೋಗವಾದ ಱ ೞ ೨ ಕೂಡಿ ಒಟ್ಟು ೫೧ ಅಕ್ಷರಗಳಿವೆ.

ಅಕ್ಷರಗಳನ್ನು ಎತ್ತಿ ಹೇಳುವಾಗ ಉಚ್ಚಾರಣೆಗೆ ಸುಲಭವಾಗು ವಂತೆ ಅವಕ್ಕೆ 'ಕಾರ' ಎಂಬ ಪ್ರತ್ಯಯವನ್ನು ಸೇರಿಸುತ್ತಾರೆ.

ಉದಾ:— ಅಕಾರ, ಯಕಾರ, ವಕಾರ, ನಕಾರ ಇತ್ಯಾದಿ.

ಎರಡನೆಯ ಅಧ್ಯಾಯ

ಸ್ವರಗಳೂ ವ್ಯಂಜನಗಳೂ

ಕನ್ನಡ ಸ್ವರಗಳಲ್ಲಿ ಅ ಆ, ಇ ಈ, ಉ ಊ, ಎ ಏ, ಒ ಓ, ಇವುಗಳಲ್ಲಿ ಕ್ರಮವಾಗಿ ಎರಡೆರಡು ಸ್ವರಗಳನ್ನು ಸವರ್ಣಗಳೆನ್ನು ವರು. ಅವು ಒಂದೇ ಅಕ್ಷರದ ಹ್ರಸ್ವದೀರ್ಘ ಉಚ್ಚಾರಗಳು.

ಅ ಇ ಉ ಎ ಒ ಇವು ಮೂಲಸ್ವರಗಳು. ಇವಕ್ಕೆ ಇತರ ಸ್ವರಗಳ ಸಹಾಯ ಬೇಡವಾದುದರಿಂದ ಸ್ವತಂತ್ರಸ್ವರಗಳೆನ್ನಬಹುದು.

ಆ ಈ ಊ ಏ ಐ ಓ ಔ ಇವು ಸಂಧ್ಯಕ್ಷರಗಳು. ಅವು ಎರಡು ಸ್ವರಗಳು ಸಂಧಿಯಾಗಿ ಆದುವುಗಳು.

ಅ+ಅ=ಆ	ಅ+ಇ=ಏ
ಇ+ಇ=ಈ	ಅ+ಏ=ಐ
ಉ+ಉ=ಊ	ಅ+ಉ=ಓ
	ಅ+ಓ=ಔ

ಮುಂದೆ ಸಂಧಿಯ ಅಧ್ಯಾಯದಲ್ಲಿ ಈ ಸ್ವರಗಳ ಕೂಟದಿಂದ ಈ ಮಿಶ್ರಸ್ವರಗಳು ಹುಟ್ಟುವುದನ್ನು ವಿಶದವಾಗಿ ಕಾಣಬಹುದು.

ವ್ಯಂಜನಗಳ ಸುಲಭ ಉಚ್ಚಾರಣೆಗಾಗಿ ಹೆಚ್ಚಾಗಿ ಮೊದಲ ಸ್ವರವಾದ ಅಕಾರ ಕೂಡಿಯೇ ಬರೆಯುವರು.

ಅಲ್ಪ.	ಮಹಾ.	ಅಲ್ಪ.	ಮಹಾ.	ಅನು
ಕ	ಖ	ಗ	ಘ	ಙ
ಚ	ಛ	ಜ	ಝ	ಞ
ಟ	ಠ	ಡ	ಢ	ಣ
ತ	ಥ	ದ	ಧ	ನ
ಪ	ಫ	ಬ	ಭ	ಮ

ಯ ರ ಲ ವ ಶ ಷ ಸ ಹ ಳ

ಆಯಾ ವರ್ಗವನ್ನು ಆ ವರ್ಗದ ಮೊದಲನೆಯ ಅಕ್ಷರದಿಂದ ಕವರ್ಗ, ಚವರ್ಗ, ಮುಂತಾಗಿ ಕರೆಯುವರು.

ಪ್ರತಿ ವರ್ಗದಲ್ಲಿ ಐದೈದು ಅಕ್ಷರಗಳಿವೆ. ಪ್ರತಿ ವರ್ಗದ ಮೊದಲನೆಯ ಅಕ್ಷರಗಳಿಗೆ ಉಚ್ಚಾರಣೆಗೆ ಕಡಿಮೆ ಉಸಿರು ಬೇಕಾಗುವುದರಿಂದ ಅಲ್ಪಪ್ರಾಣವೆಂದು ಹೆಸರು. ಎರಡನೆಯ ನಾಲ್ಕನೆಯ ಅಕ್ಷರಗಳಿಗೆ ಹೆಚ್ಚು ಉಸಿರು ಬೇಕಾಗುವುದರಿಂದ ಮಹಾಪ್ರಾಣ

ವೆಂದು ಹೆಸರು. ವರ್ಗದ ಐದನೆಯ ಅಕ್ಷರವನ್ನು ಮೂಗಿನ ಸಹಾಯದಿಂದ ಉಚ್ಚರಿಸುವುದರಿಂದ ಅನುನಾಸಿಕವೆನ್ನುವರು.

ಮಹಾಪ್ರಾಣಗಳು ಕನ್ನಡದಲ್ಲಿ ವಿಶೇಷವಾಗಿಲ್ಲ. ಅವುಗಳು ಕನ್ನಡದಲ್ಲಿ ಬಳಕೆಯಾಗಿರುವ ಸಂಸ್ಕೃತ ಶಬ್ದಗಳನ್ನು ಬರೆಯುವುದಕ್ಕೆ ಮುಖ್ಯವಾಗಿ ಉಪಯೋಗವಾಗುವುವು.

ವರ್ಗದ ಮೊದಲಿನ ಎರಡು ಅಕ್ಷರಗಳು ನಾಲಗೆಗೆ ಕಠಿನವಾಗಿದ್ದುದರಿಂದ ಪರುಷಾಕ್ಷರಗಳೆಂತಲೂ ಮತ್ತಿನ ಎರಡು ಮೃದುವಾದುದರಿಂದ ಸರಳಾಕ್ಷರಗಳೆಂತಲೂ ಕರೆಯಲ್ಪಡುವುವು.

ಪರುಷ	ಸರಳ
ಕ ಖ	ಗ ಘ
ಚ ಛ	ಜ ಝ
ಟ ಠ	ಡ ಢ
ತ ಥ	ದ ಧ
ಪ ಫ	ಬ ಭ

ಅವರ್ಗೀಯಗಳೊಳಗಣ ಯ ಲ ವ ಕಾರಗಳು ಅನುನಾಸಿಕಗಳಾಗಿಯೂ ಅನನುನಾಸಿಕಗಳಾಗಿಯೂ ಇರುವುವು. ಅವುಗಳ ಉಚ್ಚಾರವನ್ನು ರೂಢಿಯಿಂದ ತಿಳಿಯಬಹುದು.

ಯ—ಅನುನಾಸಿಕ:—ಮೇಯಿಸು, ನೋಯಿಸು, ಮಯಣ ಇತ್ಯಾದಿ.

ಅನನುನಾಸಿಕ:—ಬಯಕೆ, ಬಯಲು, ವಾಯು ಇತ್ಯಾದಿ.

ಲ—ಅನುನಾಸಿಕ:—ಬೆಲ್ಲ, ಹಲ್ಲಣ, ಇಲ್ಲಣ ಇತ್ಯಾದಿ.

ಅನನುನಾಸಿಕ:—ಹಾಲು, ಹಲಸು, ಹಲಗೆ ಇತ್ಯಾದಿ.

ವ—ಅನುನಾಸಿಕ:—ಮಾವ, ಸೇವಗೆ, ಮಾವುತ ಇತ್ಯಾದಿ.

ಅನನುನಾಸಿಕ:—ತವಕ, ಹವಳ, ಕವಳ ಇತ್ಯಾದಿ.

ಕಾಗುಣಿತ

ವ್ಯಂಜನಗಳಿಗೆ ಅಕಾರ ಮಾತ್ರ ಕೂಡುವುದಲ್ಲ. ಎಲ್ಲಾ ಸ್ವರಗಳೂ ಕೂಡುವುವು. ಆಗ ಕೂಡಿದ ಸ್ವರಕ್ಕೆ ತಕ್ಕಂತೆ ವ್ಯಂಜನದ ರೂಪವು ಬದಲಾಗುವುದು.

ಉದಾ:

ಕ್ + ಅ = ಕ	ಕ್ + ಎ = ಕೆ
ಕ್ + ಆ = ಕಾ	ಕ್ + ಏ = ಕೇ
ಕ್ + ಇ = ಕಿ	ಕ್ + ಐ = ಕೈ
ಕ್ + ಈ = ಕೀ	ಕ್ + ಒ = ಕೊ
ಕ್ + ಉ = ಕು	ಕ್ + ಓ = ಕೋ
ಕ್ + ಊ = ಕೂ	ಕ್ + ಔ = ಕೌ
ಕ್ + ಋ = ಕೃ	

ಮಿಕ್ಕವುಗಳನ್ನು ಇದೇ ರೀತಿ ಬರೆಯುವುದು.

ಕನ್ನಡ ಲಿಪಿಯಲ್ಲಿ ಒಂದು ಅಕ್ಷರಕ್ಕೆ ಸ್ವತಃ ಇರುವಾಗ ಒಂದು, ಬೇರೊಂದರೊಡನೆ ಬರುವಾಗ ಒಂದು, ಹೀಗೆ ಎರಡು ಚಿಹ್ನೆಗಳಿರುವುವು. ಈ ಚಿಹ್ನೆಗಳೆರಡಾದರೂ ಆ ಅಕ್ಷರ ಒಂದೇ ಎಂದು ತಿಳಿಯಬೇಕು.

ಹೀಗೆ ಸ್ವರ ಸೇರಿ ಬರೆದ ವ್ಯಂಜನಗಳಿಗೆ ಕಾಗುಣಿತಗಳೆಂದು ಹೆಸರು.

ಒತ್ತಕ್ಷರ

ಎರಡು ವ್ಯಂಜನಗಳು ನಡುವೆ ಸ್ವರವಿಲ್ಲದೆ ಒತ್ತಾಗಿ ಬಂದಲ್ಲಿ ಒತ್ತಕ್ಷರವಾಗುವುದು.

ಉದಾ:— ನನ್ನ, ತಮ್ಮ, ಮಜ್ಜಿಗೆ, ಕಳ್ಳ, ಇತ್ಯಾದಿ.

ನ್ ನ್ ಅ— ಇದನ್ನು ಬರೆಯುವಾಗ ನ ಬರೆದು ಅದರ ಅಡಿ ಒತ್ತಾಗಿ ಬರುವ ನಕಾರದ ್ನ ಗುರುತನ್ನು ಹಾಕಿ ನ್ನ ಎಂದು ಬರೆಯುವರು.

ಪ್ರತಿಯೊಂದು ಅಕ್ಷರಕ್ಕೆ ಒತ್ತಾಗಿ ಬರುವಾಗ ಉಪಯೋಗಿಸುವ ಸಂಜ್ಞೆ ಬೇರೆ ಉಂಟು. ಅದನ್ನು ಲಕ್ಷ್ಯಿಸಿ ಕಲಿಯಬೇಕು.

ಪ್ರಾರಂಭದಲ್ಲಿ ಒತ್ತಕ್ಷರ ಬರೆಯುವಾಗ ಒಂದು ವ್ಯಂಜನದ ಕೆಳಗೆ ಅದೇ ವ್ಯಂಜನವನ್ನು ಬರೆಯುತ್ತಿದ್ದಂತೆ ಭಾವಿಸಬಹುದು. ಹೀಗೆ:— ಮ ನ ಪ ಅವಸರದ ಬರವಣಿಗೆಯಲ್ಲಿ ಅಡಿ ಅಕ್ಷರವು
ಮ ನ ಪ
ವಿಕಾರಹೊಂದುತ್ತ ಅದರ ಒಂದು ಹೊಸ ರೂಪದಂತೆ ತೋರ ಹತ್ತಿತು. ಅವು ಈಗಣ ರೂಢಿ ಪ್ರಕಾರ ಮ್ಮ, ನ್ನ, ಪ್ಪ ಎಂದಾದುವು.

ರಕಾರಕ್ಕೆ ಒತ್ತಾಗಿ ಬೇರೆ ಅಕ್ಷರವು ಬಂದಾಗ, 'ಅರ್ಕ' ಅದನ್ನು ಹಾಗೆ ಬರೆಯದೆ ಅರ್ಕ ಎಂದು ಬರೆಯುವರು. ೯ ಸಂಜ್ಞೆಯನ್ನು ರೇಫೆ ಇಲ್ಲವೆ ಅರ್ಕಾ ಒತ್ತೆಂದು ಕರೆಯುವರು. ಈ ಅರ್ಕಾ ಒತ್ತನ್ನು ಅಕ್ಷರದ ಅನಂತರ ಬರೆಯುವರಾದರೂ ಅದರ ಉಚ್ಚಾರವು ಮೊದಲೇ ಬರುವುದು.

ದುರ್ಯೋಧನ— ಇದನ್ನು ದುರ್ಯೋಧನ ಎಂದು ಬರೆಯುವುದು ತಪ್ಪು. ಇಲ್ಲಿ ಅರ್ಕಾ ಒತ್ತು ದೀರ್ಘಾಕ್ಷರವಾದ ಯೋಕಾರದ ಅನಂತರವೇ ಬರಬೇಕು.

ಹ್ಯಾ ಕೋರ್ಟು ರೂಪ್ಯಾ— ಹ್ಯಾಪ್ಯಾ— ಇವು ಸರಿಯಲ್ಲ. ಒಂದು ವ್ಯಂಜನದ ಮೇಲೆ ಒಮ್ಮೆ ಒಂದೇ ಸ್ವರವು ಹತ್ತುವುದಲ್ಲದೆ ಎರಡು ಸ್ವರಗಳು ಹತ್ತಲಾರವು. ಇದು ಹ್+ಆ+ಐ ಮೂರು ಅಕ್ಷರಗಳ ಕೂಟವಾಗಿ ತಪ್ಪಾಯಿತು. ಇವನ್ನು ಹಾಯ್, ಪಾಯ್ ಎಂದು ಬರೆಯುವುದೇ ಸಾಧು.

ಅಂಣ, ತಂಮ, ಅಂನ— ಇವುಗಳನ್ನು ಅಣ್ಣ, ತಮ್ಮ, ಅನ್ನ ಎಂದು ಬರೆಯುವುದು ಕ್ರಮ.

ಒಂದು ವ್ಯಂಜನಕ್ಕೆ ಒತ್ತಾಗಿ ಅದೇ ವ್ಯಂಜನ ಬರದೆ ಬೇರೆ ಒಂದು ಇಲ್ಲವೆ ಹೆಚ್ಚು ವ್ಯಂಜನಗಳು ಬಂದರೆ ವಿಜಾತೀಯ ಸಂಯುಕ್ತಾಕ್ಷರ, ಅಥವಾ ವಿಜಾತೀಯ ಒತ್ತಕ್ಷರವೆನ್ನುವರು.

ಉದಾ:- ಪ್ರಯತ್ನ, ಪರೀಕ್ಷೆ, ಸಮುದ್ರ, ಇನ್ಸ್‌ಪೆಕ್ಟರ್.

ಕನ್ನಡದಲ್ಲಿ ಈ ರೀತಿಯ ಒತ್ತಕ್ಷರಗಳು ಪ್ರಾಯಶಃ ಇಲ್ಲ. ಇವು ಬಹುತರವಾಗಿ ಸಂಸ್ಕೃತ, ಇಂಗ್ಲಿಷು ಮೊದಲಾದ ಭಾಷೆಗಳಿಂದ ಬಂದುವು.

ಮೂರನೆಯ ಅಧ್ಯಾಯ

ಶಬ್ದಗಳು

ಪ್ರಾರಂಭದಲ್ಲಿ ಒಂದು ಭಾಷೆ ತನ್ನ ಶಬ್ದಗಳಿಂದಲೇ ಕೂಡಿರುತ್ತದೆ. ಕ್ರಮೇಣ ಬೇರೆ ಭಾಷೆಗಳ ಸಂಪರ್ಕವಾಗಿ ಆಯಾ ಭಾಷೆಗಳ ಶಬ್ದಗಳು ಅದರೊಳಗೆ ಸೇರಿಹೋಗುತ್ತವೆ.

ಕನ್ನಡ ಭಾಷೆಯಲ್ಲಿ ಅಚ್ಚಗನ್ನಡ ಶಬ್ದಗಳೂ ಅನ್ಯಭಾಷೆಗಳ ಶಬ್ದಗಳೂ ಇವೆ. ಅಚ್ಚಗನ್ನಡ ಶಬ್ದಗಳನ್ನು ದೇಶ್ಯಗಳೆಂದೂ ಇತರ ಶಬ್ದಗಳನ್ನು ಅನ್ಯದೇಶ್ಯಗಳೆಂದೂ ಹೇಳುವರು. ಅನ್ಯದೇಶ್ಯಗಳಲ್ಲಿ ಹೆಚ್ಚಿನವು ಸಂಸ್ಕೃತ ಶಬ್ದಗಳು. ಹಲಕೆಲವು ಹಿಂದುಸ್ಥಾನಿ, ಮರಾಠಿ, ಇಂಗ್ಲಿಷ್ ಶಬ್ದಗಳೂ ಇವೆ.

ದೇಶ್ಯ- ಅಪ್ಪ, ಅಮ್ಮ, ನೆಲ, ಹೊಲ, ಮನೆ, ಹೋಗು, ಕೇಳು, ನಡೆ, ಒಂದು, ಎರಡು, ಕಪ್ಪು, ಕೆಂಪು, ಕೆಳಗೆ, ಮೇಲೆ ಇತ್ಯಾದಿ.

ಸಂಸ್ಕೃತ:— ಭೂಮಿ, ಪಟ್ಟಣ, ಪರ್ವತ, ಸಂಖ್ಯೆ, ರಾತ್ರಿ ಇತ್ಯಾದಿ.

ಹಿಂದುಸ್ಥಾನಿ: – ಸಲಾಮು, ಗುಲಾಮ, ಕಚೇರಿ, ಬಂದೂಕ ಇತ್ಯಾದಿ.

ಮರಾಠಿ:— ಮುಝು, ಭಾಪ್, ಬತ್ತಿಸ್, ರಾವುತ ಇತ್ಯಾದಿ.

ಇಂಗ್ಲಿಷ್:— ಆಸ್ಪತ್ರಿ, ಲಾಟನು, ಹೋಟೇಲು, ಪೋಲೀಸು, ಇಸ್ಕೂಲ್, ಕೋರ್ಟು, ರೈಲು, ಮೋಟಾರ್, ಪೆಟ್ರೋಲ್ ಇತ್ಯಾದಿ.

ಈಗ ವ್ಯವಹಾರದಲ್ಲಿರುವ ಭಾಷೆಯನ್ನು ಹೊಸಗನ್ನಡವೆನ್ನುವರು. ಹಳೆಯ ಕನ್ನಡ ಗ್ರಂಥಗಳಲ್ಲಿ ಈ ಭಾಷೆಯ ಹಳೆಯ ರೂಪು ಕಾಣುವುದು. ಅದನ್ನು ಹಳಗನ್ನಡವೆನ್ನುವರು.

ಹಳಗನ್ನಡ ಶಬ್ದಗಳು ಹೊಸಗನ್ನಡಕ್ಕೆ ಬರುವಾಗ ಸ್ವಲ್ಪ ವಿಕಾರಹೊಂದಿವೆ.

ವ್ಯಂಜನಾಂತ ಶಬ್ದಗಳಿಗೆ ಉಕಾರ ಸೇರಿರುವುದು.

ಉದಾ:— ಆಳ್—ಆಳು, ಕೂಳ್—ಕೂಳು, ಕೀಳ್—ಕೀಳು, ತೇರ್—ತೇರು, ಸಾರ್—ಸಾರು, ಇತ್ಯಾದಿ.

ಕೆಲವು ವ್ಯಂಜನಾಂತ ಶಬ್ದಗಳು ಉಕಾರ ಹೊಂದುವಾಗ ವ್ಯಂಜನವು ದ್ವಿತ್ವ ಎಂದರೆ ಒತ್ತಕ್ಷರವಾಗುವುದುಂಟು.

ಉದಾ:— ಕಳ್ — ಕಳ್ಳು, ಮುಳ್ — ಮುಳ್ಳು, ಕೊಳ್ — ಕೊಳ್ಳು, ಕಣ್ — ಕಣ್ಣು, ನಿಲ್ — ನಿಲ್ಲು.

ಪಕಾರವು ಹಕಾರವಾಗುವುದು.

ಪಸಿವು — ಹಸಿವು; ಪಕ್ಕಿ — ಹಕ್ಕಿ; ಪಗೆ — ಹಗೆ; ಪಗಲ್ — ಹಗಲು; ಪಾಡು — ಹಾಡು; ಪಾರ್ — ಹಾರು; ಪತ್ತು — ಹತ್ತು, ಇತ್ಯಾದಿ.

ಯಕಾರಾಂತಗಳಿಗೆ ಇಕಾರವು ಬರುವುದು.

ಉದಾ:— ಬಾಯ್ — ಬಾಯಿ; ತಾಯ್ — ತಾಯಿ; ನಾಯ್ — ನಾಯಿ, ಇತ್ಯಾದಿ.

ಬೇರೆ ವಿಧದಲ್ಲಿಯೂ ಹಲವು ಹಳಗನ್ನಡ ಶಬ್ದಗಳು ಹೊಸ ಗನ್ನಡದಲ್ಲಿ ರೂಪವಿಕಾರಹೊಂದಿವೆ.

ಉರ್ದು — ಉದ್ದು; ಇಹಗೆ — ಹೀಗೆ, ಇಂತಹ — ಇಂಥ; ಪೊರಮಡು — ಹೊರಡು; ಬರ್ದುಕು — ಬದುಕು; ತೋಂಟ — ತೋಟ; ಪಡಂಗು — ಹಡಗು; ಬೆಡಂಗು — ಬೆಡಗು, ಇತ್ಯಾದಿ.

ಸಂಸ್ಕೃತ ರೂಪಕ್ಕೆ ಸಮವಾಗಿ ಕನ್ನಡದಲ್ಲಿ ಉಪಯೋಗವಾಗುವ ಶಬ್ದಗಳನ್ನು ಸಮಸಂಸ್ಕೃತವೆನ್ನುವರು.

ಉದಾ:—ಸ್ತ್ರೀ, ಪುರುಷ, ಜನ, ವನ, ಮುಖ, ಕವಿ, ರವಿ, ಇತ್ಯಾದಿ.

ಇದನ್ನು ತತ್ಸಮ ಎಂದು ಕರೆದುದುಂಟು, ಆದರೆ ಇದು ಸಾಧುವಾದ ಹೆಸರಲ್ಲ. ಏಕೆಂದರೆ ಸಂಸ್ಕೃತ ಭಾಷೆಗೂ ಕನ್ನಡ ಭಾಷೆಗೂ ಸಮಾನವಾಗಿರುವ ಕೆಲವು ಶಬ್ದಗಳಿಗೆ ತತ್ಸಮ ಎಂಬ ಹೆಸರನ್ನು ಪೂರ್ವಿಕರು ಹೇಳಿದ್ದಾರೆ.

ತತ್ಸಮಕ್ಕೆ ಉದಾಹರಣೆ—ಮಣಿ, ಮಂಚ, ಪಟ್ಟ, ತೋರಣ, ಕಂಕಣ, ಕೋಟಿ ಇತ್ಯಾದಿ.

ಸಂಸ್ಕೃತರೂಪಕ್ಕೆ ಸಮವಾಗಿ ಕನ್ನಡದಲ್ಲಿ ಉಪಯೋಗವಾಗುವ ಸಂಸ್ಕೃತ ಭಾಷೆಯ ಶಬ್ದಗಳು ಸಮಸಂಸ್ಕೃತವೆಂದೂ, ಸಂಸ್ಕೃತ ಕನ್ನಡ ಭಾಷೆಗಳಿಗೆ ಸಮಾನವಾದ ಶಬ್ದಗಳು ತತ್ಸಮವೆಂದೂ ಹೇಳುವುದು ಯೋಗ್ಯವು.

ಸಂಸ್ಕೃತ ಶಬ್ದಗಳು ಕನ್ನಡಕ್ಕೆ ಬರುವಾಗ ಹಲವು ರೂಪವಿಕಾರಹೊಂದಿರುವುವು. ಅವುಗಳನ್ನು ತದ್ಭವವೆಂದು ಕರೆಯುವರು.

ಉದಾ:—ಘುಟಿಕಾ—ಗಳಿಗೆ; ಶೃಂಖಲಾ-ಸಂಕಲೆ; ರತ್ನ—ರನ್ನ; ಜ್ಯೋತಿಷ್ಕ—ಜೋಯಿಸ, ಇತ್ಯಾದಿ.

ಇಂಗ್ಲಿಷ್ ಶಬ್ದಗಳು ಕೆಲವು ಇದ್ದ ಹಾಗೆಯೂ ಕೆಲವು ವಿಕಾರಹೊಂದಿಯೂ ಒಳಗೆ ಬಂದಿರುವುವು.

ವಿಕಾರಹೊಂದಿದುವು—ಇಸ್ಕೂಲು, ಆಸ್ಪತ್ರಿ, ರೋಟು ಇತ್ಯಾದಿ.

ವಿಕಾರಹೊಂದದವು-ಮೋಟರ್, ಪೆಟ್ರೋಲ್, ಸ್ಟೇಶನ್, ಇತ್ಯಾದಿ.

ಕನ್ನಡದಲ್ಲಿ ಮಹಾ ಪ್ರಾಣಾಕ್ಷರಗಳೂ ಋ, ಶ, ಷ ವಿಸರ್ಗಗಳೂ ಇಲ್ಲ. ಅವು ಸಂಸ್ಕೃತ ಶಬ್ದಗಳಿಂದಾಗಿ ಕನ್ನಡ ಅಕ್ಷರ

ಮೂಲೆಗೆ ಸೇರಿದುವು. ಅವು ಇರುವ ಶಬ್ದಗಳನ್ನು ಸಂಸ್ಕೃತವೆಂದು ನಿಶ್ಚಯಿಸಬಹುದು.

ಉದಾ:- ರಥ, ಮುಖ, ಶಂಖ, ಋಷಿ, ಪುರುಷ, ಬಹುಶಃ.

ಅಭ್ಯಾಸ

ಕೆಳಗಣ ಶಬ್ದಗಳಲ್ಲಿ ಸಂಸ್ಕೃತ ಶಬ್ದಗಳನ್ನು ಅಕ್ಷರ ಪರಿಚಯದಿಂದ ಹೆಕ್ಕಿರಿ:-

ಪುಷ್ಪ. ಗಡ್ಡೆ. ಭೇದ, ಫಲ, ಮರ, ಪಶು, ಬಳ್ಳಿ, ಋಷಿ, ಚೆನ್ನ, ಬೇರು, ಋತು, ಧನ, ದನ, ಮನೆ, ಕಥೆ, ಘಂಟೆ, ಮಂಡೆ, ಹಾಡು, ಘನ, ಪುನಃ, ಖಂಡ, ಖಡ್ಗ, ದುಃಖ, ನಡೆ.

ನಾಲ್ಕನೆಯ ಅಧ್ಯಾಯ


ಅಂಕೆ ಸಂಖ್ಯೆಗಳು

ವಸ್ತುಗಳ ಗಣನೆಗೆ ಅಗತ್ಯವಾಗಿ ಅಂಕೆಸಂಖ್ಯೆಗಳು ಭಾಷೆಯೊಳಗೆ ಸೇರುವುವು. ಒಂದು, ಎರಡು, ಮೂರು ಎಂಬ ಭಾವನೆಗೆ ತಕ್ಕಂತೆ ಅವುಗಳನ್ನು ಅಂಕಿಸುವುದಕ್ಕೆ ಭಾಷೆಯಲ್ಲಿ ಅವಕ್ಕೆ ಅಂಕೆಗಳನ್ನು ಮಾಡಿರುತ್ತಾರೆ.

ಒಂದು ೧, ಎರಡು ೨, ಮೂರು ೩, ನಾಲ್ಕು ೪, ಐದು ೫, ಆರು ೬, ಏಳು ೭, ಎಂಟು ೮, ಒಂಭತ್ತು ೯, ಹತ್ತು ೧೦.

ಪ್ರಾರಂಭದಲ್ಲಿ ಇವನ್ನು ಒಂದು ವೇಳೆಗೆ ಹೀಗೆ ಬರೆಯುತ್ತಿದ್ದರು:– ೧. ೧೧, ೧೧೧, ೧೧೧೧, ೧೧೧೧೧.


ಆ ಮೇಲೆ ಅವನ್ನೇ ಮೋಡಿಯಾಗಿ



ಹೀಗೆ ಬರೆದಿರಬಹುದು.

೧, ೨, ೩, ೪, ೫ ಎಂಬುದು ಅವುಗಳ ಈಗಿನ ಸುಧಾರಿತ ರೂಪವು.

ಇಂಗ್ಲಿಷಿನಲ್ಲಿ ಉಪಯೋಗವಾಗುವ ಅರಬಿ ಅಂಕೆಗಳಲ್ಲಿ ಈ ಊಹೆ ಸ್ಪಷ್ಟವಾಗುವದು.



ಇವು ಈಗ ಈ ರೂಪ ಆಗಿವೆ.

1 2 3 4 5

ಗಣಿಸುವಾಗ ದಶಕ ದಶಕ ಎಂದರೆ ಹತ್ತು ಹತ್ತುಗಳಾಗಿ ಗಣಿಸುವುದು ಕ್ರಮ.

ಹತ್ತು ಆದ ಮೇಲೆ ಅದಕ್ಕೆ ಒಂದೊಂದೇ ಕೂಡಿಸುವುದು.

ಹತ್ತು+ಒಂದು=ಹನ್ನೊಂದು ೧೧.

ಹತ್ತು+ಎರಡು=ಹನ್ನೆರಡು ೧೨. ಇದನ್ನು ಹದಿನೆರಡು ಎಂದು ಬರೆಯುವುದು ತಪ್ಪು.

ಹತ್ತು+ಮೂರು=ಹದಿಮೂರು

ಆ ಮೇಲೆ ಕ್ರಮವಾಗಿ

ಹದಿನಾಲ್ಕು ಹದಿನೈದು ಹದಿನಾರು ಹದಿನೇಳು ಹದಿನೆಂಟು ಹತ್ತೊಂಭತ್ತು.

ಎರಡು ಹತ್ತು=ಇಪ್ಪತ್ತು; ಮೂರು ಹತ್ತು=ಮೂವತ್ತು; ನಾಲ್ಕು ಹತ್ತು=ನಾಲ್ವತ್ತು; ಐದು ಹತ್ತು=ಐವತ್ತು; ಆರು ಹತ್ತು=ಅರ್ವತ್ತು; ಏಳು ಹತ್ತು=ಎಪ್ಪತ್ತು; ಎಂಟು ಹತ್ತು=ಎಂಭತ್ತು; ಒಂಭತ್ತು ಹತ್ತು=ತೊಂಭತ್ತು; ಹತ್ತು ಹತ್ತು=ನೂರು.

ಹತ್ತು ನೂರು=ಸಾವಿರ.

ನೂರು ಸಾವಿರ=ಲಕ್ಷ.

ನೂರು ಲಕ್ಷ=ಕೋಟಿ.

ಅದು ಕನ್ನಡ ಭಾಷೆಯ ಗಣನೆಯ ಕ್ರಮ.

ಅಂಕೆಗೆ ಅನೆಯ ಇಲ್ಲವೆ ಅನೇ ಸೇರಿಸಿದರೆ ಸ್ಥಾನವಾಚಕ ವಾಗುವುದು.

ಉದಾ:—ಒಂದನೆಯ, ಎರಡನೆಯ, ಮೂರನೆಯ ಇತ್ಯಾದಿ.

ರಾಜರ ಹೆಸರುಗಳ ಮುಂದೆ ಆ ಹೆಸರ ಇಂತಿಷ್ಟನೆಯವನೆಂದು ಹೇಳುವಲ್ಲಿ ಇಮ್ಮಡಿ–ಎರಡನೆಯ, ಮುಮ್ಮಡಿ–ಮೂರನೆಯ, ನಾಲ್ವಡಿ—ನಾಲ್ಕನೆಯ ಇತ್ಯಾದಿ ರೂಪಗಳುಂಟು. ಈಗಿನ ಮೈಸೂರು ರಾಜರ ಹಿರಿಯರನ್ನು ನಾಲ್ವಡಿ ಕೃಷ್ಣರಾಜ ಎನ್ನುತ್ತಿದ್ದರು.

ಎಷ್ಟು ಬಾರಿ ಎಂದು ತಿಳಿಸುವಾಗ—ಒಂದು ಬಾರಿ, ಎರಡು ಬಾರಿ, ಮೂರು ಬಾರಿ ಎಂದು ಸಂಖ್ಯೆಗೆ ಬಾರಿ ಸೇರಿಸಿ ಹೇಳುವರು.

ಉದಾ:—'ಸಾರಿ ಹೇಳಿದೆ ಮೂರು ಬಾರಿ'.

ಹಳಗನ್ನಡದ ಒರ್ಮೆ—ಹೊಸಗನ್ನಡದಲ್ಲಿ ಒಮ್ಮೆ ಎಂದಾಗಿದೆ.

ಇರ್ಮೆ ಮೂಮೆ—ಮೊದಲಾದ ರೂಪಗಳು ಅಳಿದುಹೋಗಿವೆ.

ಅಂಕೆಗಳಿಗೆ ಸಾಹಿತ್ಯದಲ್ಲಿ ಕೆಲವು ಸಂಕೇತಗಳನ್ನು ಉಪಯೋಗಿಸುವರು.

ಒಂದು—ಚಂದ್ರ. ಚಂದ್ರನ ಬೇರೆ ಹೆಸರುಗಳು.
ಎರಡು—ದೃಷ್ಟಿ.
ಮೂರು—ಪುರ ಇತ್ಯಾದಿ
ನಾಲ್ಕು—ಗತಿ, ಸಮುದ್ರ ಇತ್ಯಾದಿ.
ಐದು— ಬಾಣ ,,
ಆರು— ರಸ ,,
ಏಳು— ಶೈಲ ,,
ಎಂಟು—ದಿಕ್ ,,
ಒಂಭತ್ತು—ಮಣಿ ,,
ಸೊನ್ನೆ—ಆಕಾಶ ,,

ಒಂದು ಸಂಖ್ಯೆಯನ್ನು ಹೇಳುವಾಗ ಏಕಸ್ಥಾನ, ದಶಸ್ಥಾನ, ಶತಸ್ಥಾನ, ಸಾವಿರ ಸ್ಥಾನ– ಈ ಕ್ರಮದಲ್ಲಿ ಹೇಳುವುದೇ ವಾಡಿಕೆ.

ಏಕ	ದಶ	ಶತ	ಸಾವಿರ	
ಮಣಿ	ಶೈಲಂ	ಗತಿ	ಇಂದು	
9	7	4	1	ಇದನ್ನು ವ್ಯವಹಾರ ಕ್ರಮದಲ್ಲಿ ಬರೆವಾಗ

1479 ಎಂದಾಯಿತು.

ಐದನೆಯ ಅಧ್ಯಾಯ

ಪದಗಳು. ಸಂಧಿ

ಶಬ್ದಗಳು ಮಾತಿನೊಳಗೆ ಸೇರುವಾಗ ಅವುಗಳ ರೂಪದಲ್ಲಿ ಸ್ವಲ್ಪ ವ್ಯತ್ಯಾಸವಾಗುತ್ತದೆ.

ಉದಾ:– ಮರ– ಇದೊಂದು ವಸ್ತುನಾಮ. ಇದು ಅದರ ಮೂಲರೂಪವು. ಈ ರೂಪವನ್ನು ಉಪಯೋಗಿಸಿ ಮಾತನ್ನು ಆಡುವಾಗ–

ಮರವು ಉದ್ದ ಬೆಳೆದಿದೆ. ಮರವನ್ನು ಕಡಿಯಬೇಡ. ಮರಕ್ಕೆ ನೀರು ಹಾಕು ಎಂದಾಗುವುದು.

ಈ ರೀತಿ ಮರ ಶಬ್ದವು ಸ್ವಲ್ಪ ರೂಪ ವ್ಯತ್ಯಾಸವಾಗುವುದು.

ಮರ ಮತ್ತು ಇಂತಹ ವಸ್ತುನಾಮಗಳ ಮೂಲರೂಪಕ್ಕೆ ಪ್ರಕೃತಿ ಎಂದು ಹೆಸರು. ಮಾತಿನೊಳಗೆ ಸೇರುವಾಗ ಅದಕ್ಕೆ ಕೂಡುವ ಅಕ್ಷರಗಳಿಗೆ ಪ್ರತ್ಯಯ ಎಂದು ಹೆಸರು. ಪ್ರಕೃತಿ ಪ್ರತ್ಯಯಗಳು ಕೂಡಿ ಆಗುವ ರೂಪಕ್ಕೆ ಪದವೆಂದು ಹೆಸರು. ಮರವು, ಮರವನ್ನು, ಇತ್ಯಾದಿ ನಾಮಪದಗಳು.

ಕ್ರಿಯಾಪದದ ಮೂಲರೂಪವನ್ನು ಧಾತು ಎನ್ನುವರು. ಧಾತುಗಳು ಮಾತಿನೊಳಗೆ ಬರುವಾಗ ಪ್ರತ್ಯಯಗಳನ್ನು ಹೊಂದಿಯೇ ಬರುವುವು.

ಉದಾ:—ರಾಮನು ಆಡುತ್ತಾನೆ, ನಾಯಿ ಓಡುತ್ತದೆ, ಸೀತೆ ಹಾಡುತ್ತಾಳೆ, ಅವರು ಹೋಗುತ್ತಾರೆ, ಇತ್ಯಾದಿ.

ಆಡುತ್ತಾನೆ, ಓಡುತ್ತದೆ, ಹಾಡುತ್ತಾಳೆ ಇತ್ಯಾದಿ ಕ್ರಿಯಾ ಪದಗಳು.

ಸಂಧಿ

ಪದಗಳು ಆಗುವಲ್ಲಿ ಸಂಧಿಯಾಗುವುದು. ಸಂಧಿ ಎಂದರೆ ಎರಡು ಅಕ್ಷರಗಳು ಒಂದಕ್ಕೆ ಒಂದು ಸೇರುವುದು.

ಪ್ರಕೃತಿಯ ಅಂತ್ಯದ ಅಕ್ಷರವೂ ಪ್ರತ್ಯಯದ ಪ್ರಾರಂಭದ ಅಕ್ಷರವೂ ಸೇರಿ ಪದವಾದಾಗ ಪದಮಧ್ಯಸಂಧಿಯಾಗುವುದು.

ಕೆಲವು ವೇಳೆ ಎರಡು ಪದಗಳು ಅಂತಾದಿ ಅಕ್ಷರಗಳು ಸೇರಿ ಸಂಧಿಯಾಗುವುದುಂಟು. ಈ ಸಂಧಿ ಮೊದಲನೆಯ ಪದದ ಅಂತ್ಯದಲ್ಲಿ ಆಗುವುದರಿಂದ ಇದನ್ನು ಪದಾಂತಸಂಧಿ ಎನ್ನುವರು.

ಪದಮಧ್ಯಸಂಧಿಗೆ:—ಮರ+ಉ=ಮರವು; ಮಾಡು+ಇಸು=ಮಾಡಿಸು; ಮರ+ಇಂದ=ಮರದಿಂದ; ಹೋಗು+ಉತ್ತ+ಆನೆ=ಹೋಗುತ್ತಾನೆ.

ಪದಾಂತ ಸಂಧಿಗೆ:—'ಅಂತಿಲ್ಲ, ಇಂತಿಲ್ಲ, ಸಂತೆಯ ಚಿಂತಿಲ್ಲ'

ಅಂತು+ಇಲ್ಲ=ಅಂತಿಲ್ಲ; ಇಂತು+ಇಲ್ಲ=ಇಂತಿಲ್ಲ; ಚಿಂತೆ+ಇಲ್ಲ=ಚಿಂತಿಲ್ಲ.

'ಸೋಲೆಂಬ ಮಾತುಂಟೆ ಕರುಮವೀರನಿಗೆ'

ಸೋಲು+ಎಂಬ=ಸೋಲೆಂಬ; ಮಾತು+ಉಂಟೆ=ಮಾತುಂಟೆ?

'ಏನಾಗಲಿಹುದೆಂದರಿಯೆ'

ಏನು+ಆಗಲು+ಇಹುದು+ಎಂದು+ಅರಿಯೆ=ಏನಾಗಲಿಹುದೆಂದರಿಯೆ.

ಲೋಪ, ಆಗಮ, ಆದೇಶ

ಸಂಧಿಯಾಗುವಲ್ಲಿ ಅಕ್ಷರವಿಕಾರಗಳಾಗುವುವು. ಕೆಲವು ವೇಳೆ ಒಂದು ಅಕ್ಷರವು ಹೋಗಿಬಿಡುವುದು; ಇಲ್ಲವೆ ಒಂದು ಹೊಸ ಅಕ್ಷರವು ಬಂದು ಸೇರುವುದು; ಇಲ್ಲವೆ ಒಂದು ಹೋಗಿ

ಇನ್ನೊಂದು ಬರುವುದು. ಇವಕ್ಕೆ ಕ್ರಮವಾಗಿ ಲೋಪ, ಆಗಮ, ಆದೇಶ ಎಂದು ಹೆಸರು.

ಲೋಪಕ್ಕೆ:—'ಎನ್ನರಸ, ಚೆನ್ನರಸ.'

'ಮರೆಯಲಿರ್ದುದ ಸೊಗವನಿಂತು ಕವಿಸುತಿರ್ಪನಾರ್'

'ಮುನಿಸೇಕೆಲೆ ಮಗನೆನ್ನೊಡನೆ'

ಎನ್ನ+ಅರಸ
ಚೆನ್ನ+ಅರಸ } ಇಲ್ಲಿ ಪೂರ್ವಪದದ ಅಂತ್ಯದ ಅಕಾರವು ಲೋಪವಾಯಿತು.

ಮರೆಯಲಿ+ಇರ್ದುದ=ಇಕಾರ ಲೋಪವಾಯಿತು.

ಸೊಗವನು+ಇಂತು=ಸೊಗವನಿಂತು ಎಂಬಲ್ಲಿ ಪೂರ್ವಪದದ ಉಕಾರವು ಲೋಪವಾಯಿತು.

ಮುನಿಸು+ಏಕೆ+ಎಲೆ=ಮುನಿಸೇಕೆಲೆ; ಮಗನೆ+ಎನ್ನ+ಒಡನೆ=ಮಗನೆನ್ನೊಡನೆ.

ಮುನಿಸು—ಇಲ್ಲಿಯ ಉಕಾರಕ್ಕೆ ಲೋಪ; ಏಕೆ—ಇಲ್ಲಿಯ ಎಕಾರಕ್ಕೆ ಲೋಪ ಇತ್ಯಾದಿ.

ಲೋಪಸಂಧಿಯನ್ನು ಅರ್ಥಕೆಡುವ ಪಕ್ಷದಲ್ಲಿ ಮಾಡಬಾರದು.

ಕೊಡೆ+ಇದೆ—ಇದನ್ನು ಕೊಡಿದೆ ಎಂದು ಮಾಡಿದರೆ ಪದದ ಅರ್ಥವು ಸ್ಪಷ್ಟವಾಗುವುದಿಲ್ಲ. ಹಾಗೆಯೆ ಮನೆ+ಇದು ಎಂಬುದನ್ನು ಮನಿದು ಎಂದು ಸಂಧಿಮಾಡಬಾರದು.

ಆಗಮಕ್ಕೆ—'ಮಳೆಯಾಗಿ ಸುರಿದ ಜಲ.'

ಮಳೆ+ಆಗಿ=ಮಳೆಯಾಗಿ—ಇಲ್ಲಿ ಯಕಾರಾಗಮವಾಯಿತು.

'ಹನುಮಗಿರಿಯೆ ಸೊಗಸಿನ ನೆಲೆಯೆ
ಎನ್ನಯ ನಿನ್ನಯ ಕೆಳೆಯಿಂತು
ಅನುದಿನ ಬೆಳೆಯಲಿ'

ಇಲ್ಲಿ ಪದಾಂತಸಂಧಿಯಲ್ಲಿಯೂ ಪದಮಧ್ಯಸಂಧಿಯಲ್ಲಿಯೂ ಯಕಾರಾಗಮವಾಗಿದೆ.

ಲೋಕವಿದು ದುಃಖಮಯವೆಂಬುದಿದು ನಿಜವಹುದು.

ಲೋಕ+ಇದು; ದುಃಖಮಯ+ಎಂಬುದು; ನಿಜ+ಅಹುದು.

ಇಲ್ಲಿ ಸಂಧಿಯಾಗುವಾಗ ವಕಾರಾಗಮವಾಯಿತು.

ಆದೇಶಕ್ಕೆ—

ಕಣ್+ಪನಿ=ಕಂಬನಿ. ಇಲ್ಲಿ ಬಕಾರಾದೇಶವಾಗಿದೆ.

ನಿದ್ದೆ+ಕಳೆದು=ನಿದ್ದೆಗಳೆದು; ಗಕಾರಾದೇಶವಾಗಿದೆ.

ಅಭ್ಯಾಸ

೧. ಕೆಳಗಣ ಪದಗಳನ್ನು ವಿಂಗಡಿಸಿ ಬರೆದು, ಅಲ್ಲಿ ಆಗುವ ಕಾರ್ಯವೇನೆಂದು ತಿಳಿಸಿರಿ.

ಪೊಗಳುವುದು ಪಿರಿದಲ್ಲ.
ಭಯವಿಲ್ಲವಪ್ಪ.
ತೂಗಿದರಾನಂದಬಟ್ಟು.
ಲತೆಗುಡಿ ಮುರಿಯಿತ್ತು.

೨. ಕೆಳಗಣ ಪದಗಳನ್ನು ಸಂಧಿಮಾಡಿ ಬರೆಯಿರಿ.

ಕಡಿಮೆ ಆಯ್ತು; ಬಹಳ ಆಯ್ತು; ಸುಮ್ಮನೆ ಇಹುದು; ಬರಿ ಬಂದು ಕನಸು; ಮಾತಾಡುತ ಪಿರಿದಳು ಒಲವಿನೊಳು; ಕಾಣಿಕೆ ಕೊಟ್ಟು.

ಆರನೆಯ ಅಧ್ಯಾಯ

ವಿವಿಧ ಸಂಧಿಗಳು

ಮಾತಿನಲ್ಲಿ ಎಷ್ಟು ಪದಗಳು ಕೂಡಿದ್ದರೂ ಸಂಧಿವಿಚಾರಕ್ಕೆ ನಾವು ಎರಡೆರಡು ಪದಗಳನ್ನೇ ತೆಗೆದುಕೊಳ್ಳುವೆವು. ಈ ತೆಗೆದುಕೊಂಡ ಎರಡು ಪದಗಳಲ್ಲಿ ಮೊದಲನೆಯ ಪದವನ್ನು **ಪೂರ್ವಪದ**ವೆಂದೂ ಎರಡನೆಯ ಪದವನ್ನು **ಪರಪದ** ಇಲ್ಲವೆ **ಉತ್ತರಪದ**ವೆಂದೂ ಹೇಳುವರು.

ಸ್ವರಸಂಧಿ

ಸಂಧಿಯಾಗುವ ಅಕ್ಷರಗಳು ಸ್ವರಗಳಾದರೆ ಸ್ವರಸಂಧಿ ಎನ್ನುವರು.

ಉದಾ:— ಪುರದ+ಅರಸನು= ಪುರದರಸನು
ಇಲ್ಲಿ+ಒಂದು = ಇಲ್ಲೊಂದು
ಬೇರೆ+ಒಬ್ಬಳು = ಬೇರೊಬ್ಬಳು
ಎಲ್ಲಿ+ಇಂದ = ಎಲ್ಲಿಂದ
ಗುಡಿ+ಒಂದು = ಗುಡಿಯೊಂದು
ತಲೆ+ಎತ್ತು = ತಲೆಯೆತ್ತು

ಕನ್ನಡ ಸ್ವರಸಂಧಿಯಾಗುವಾಗ ಲೋಪಾಗಮಗಳಾಗುವುದೇ ಹೆಚ್ಚು.

ಆ ಈ ಎಂಬ ಶಬ್ದಗಳಿಗೆ ಉ, ಊ, ಒ, ಓ, ಪರವಾದರೆ ನಡುವೆ ವಕಾರಾಗಮವಾಗುವುದು. ಈ ಎಂಬ ಶಬ್ದದ ಮುಂದೆ ಯಕಾರವೂ ಬರುವುದುಂಟು.

ಆ ಊರು = ಆವೂರು ಆ ಒಲೆ = ಆವೊಲೆ.
ಆ ಓಟ = ಆವೋಟ ಇತ್ಯಾದಿ.
ಈ ಉಂಗುರ = ಈಯುಂಗುರ, ಈವುಂಗುರ.
ಈ ಊಟ = ಈಯೂಟ, ಈವೂಟ ಇತ್ಯಾದಿ.

ವ್ಯಂಜನಸಂಧಿ

ಕೂಡುವ ಅಕ್ಷರಗಳಲ್ಲಿ ಎರಡೂ ವ್ಯಂಜನಗಳಾದರೆ, ಅಥವಾ ಒಂದು ವ್ಯಂಜನವಾದರೂ ಅಲ್ಲಿ ಆಗುವ ಸಂಧಿಯನ್ನು ವ್ಯಂಜನಸಂಧಿ ಎನ್ನುವರು.

ಉದಾ:— ಬಾಯ್+ತೆರೆ = ಬಾಯ್ದೆರೆ
ನುಣ್+ಸರ = ನುಣ್ಚರ

ಪಳದು + ಕನ್ನಡ = ಪಳಗನ್ನಡ

ಪುಲಿ + ತೊಗಲು = ಪುಲಿದೊಗಲು

ಕನ್ನಡ ವ್ಯಂಜನ ಸಂಧಿಯಾಗುವಲ್ಲಿ ಆದೇಶವಾಗುವುದು ಹೆಚ್ಚು. ಕನ್ನಡದಲ್ಲಿ ಉತ್ತರ ಪದದ ಆದಿಯಲ್ಲಿ ಕ, ತ ಇಲ್ಲವೆ ಪ ಇದ್ದರೆ ಅವುಗಳ ಬದಲಾಗಿ ಕ್ರಮವಾಗಿ ಗ, ದ, ಬ ಗಳು ಆದೇಶ ವಾಗುವುವು.

ರನ್ನ + ಕನ್ನಡಿ = ರನ್ನಗನ್ನಡಿ	ಕೆಚ್ಚನೆ + ತೆಂಗು = ಚೆಂದೆಂಗು
ಹಳ್ಳಿ + ಕಾಡು = ಹಳ್ಳಿಗಾಡು	ಕಣ್ + ಪನಿ = ಕಂಬನಿ
ಆನೆ + ತಲೆ = ಆನೆದಲೆ	ದುಕ್ಕ + ಪಡು = ದುಕ್ಕಬಡು

ಉತ್ತರ ಪದದ ಆದಿಯ ಪ, ಬ, ಮ ಗಳ ಬದಲಾಗಿ ವಕಾರಾದೇಶವಾಗುವುದು.

ಕಡು + ಬೆಳ್ಪು = ಕಡುವೆಳ್ಪು

ಮರ + ಮಣೆ = ಮರವಣೆ

ನೀರ್ + ಪೂಗಳು = ನೀರ್ವೂಗಳು

ಸಂಧಿಗಳಲ್ಲಿ ಪದಮಧ್ಯಸಂಧಿ ನಿತ್ಯ ಎಂದರೆ ತಪ್ಪದೆ ಆಗತಕ್ಕುದು.

ಮರದಲ್ಲಿ, ಕನ್ನಡಿಗ ಇತ್ಯಾದಿ. ಇದನ್ನು ಸಂಧಿಮಾಡದೆ ಬರೆಯಲಾಗದು.

ಪದಾಂತ ಸಂಧಿ ನಿತ್ಯವಲ್ಲ—ವಿಕಲ್ಪ—ಎಂದರೆ ಮಾಡಲೂ ಬಹುದು, ಬಿಡಲೂ ಬಹುದು.

ಉದಾ:—ಅವನು ಅಂಗಡಿಗೆ ಹೋದನು. ಅವನಂಗಡಿಗೆ ಹೋದನು.

ಅವಳು ಒಲಿದಳು – ನೀನು ಒಲಿದೆ.

ಅವಳೊಲಿದಳು ನೀನೊಲಿದೆ.

ಮೇಲಿನವೆರಡೂ ಸರಿಯೆ.

ಅಲ್ಲಿ ಅಲೆ ಅಲೆಯಾಗಿ ಬಂದು—ಅಲೆ ಆಲೆಯನ್ನು ಸಂಧಿ ಮಾಡಲಿಲ್ಲ.

ಕೆಲವು ಕಡೆಗಳಲ್ಲಿ ಸಂಧಿ ಆಗಲೇ ಬಾರದು. ಸಂಧಿಯಾಗದೇ ಇರುವುದಕ್ಕೆ ಪ್ರಕೃತಿಭಾವ ಎಂದು ಹೆಸರು.

ಉದಾ:— ಸಂಬೋಧನೆಯಲ್ಲಿ:—

ಮಗಳೇ! ಕನಕಾಂಗಿ! ಏಳೇಳು, ಬೆಳಗಾಯ್ತು.

ಒಬ್ಬರ ಲಕ್ಷ್ಯವನ್ನು ಒಂದು ಕಡೆ ಎಳೆವಲ್ಲಿ.

ಇದೊ! ಇದೂ! ಇಲ್ಲುರುಳ್ದ ಹಾಲೇರಿಯರ ಬಲಗಿರಿಶೃಂಗವು ಆಶ್ಚರ್ಯ, ವ್ಯಥೆ ಮೊದಲಾದವು ಸೂಚನೆಯಾಗುವಲ್ಲಿ

ಅಯ್ಯೋ ಇದೇನು ಬಂತು?

ಅರರೆ! ಇದೇನು ನಿನಗೇನಾದುದೀಗ?

ಓಹೋ! ಇರಲಿ.

ಹಾ! ಎನ್ನ ಮುದ್ದು ಲಲಿತೆ.

ಅಭ್ಯಾಸ

ಸಂಧಿ ವಿಂಗಡಿಸಿ ಬರೆಯಿರಿ—

ಸುತ್ತುಗಟ್ಟಿ; ಸಡಗರಬಟ್ಟು, ಬೊಗಸೆಗಣ್ಗಳು; ಮಿಸುಪೆವೆತ್ತು, ಮೈದೆಗೆ; ತೂಗುದೊಟ್ಟಿಲು, ಒಕ್ಕೆಸರು, ಕೈಗಾಣಿಕೆ.

ಏಳನೆಯ ಅಧ್ಯಾಯ

ಸಮಾಸ

ಪದಗಳು ಸಂಧಿಯಾಗಿ ಕೂಡುವುದಲ್ಲದೆ ಬೇರೆ ವಿಧದಲ್ಲಿಯೂ ಕೂಡುವುದುಂಟು. ಎರಡು ಇಲ್ಲವೆ ಎರಡಕ್ಕಿಂತ ಹೆಚ್ಚು ಪದಗಳು ಅರ್ಥಕ್ಕೆ ಅನುಸಾರವಾಗಿ ಸೇರಿ ಒಂದೇ ಪದವಾಗುವುವು. ಹೀಗೆ ಬಿಡಿಪದಗಳು ಕೂಡುವುದಕ್ಕೆ ಸಮಾಸವೆಂದು ಹೆಸರು.

ಸಂಧಿಯಾಗುವಲ್ಲಿ ಅಕ್ಷರ ಹೆಚ್ಚುಕಡಿಮೆ ಆಗುವಂತೆ ಪದಗಳು ಸಮಾಸವಾಗುವಾಗಲೂ ಕೆಲವು ಮಾರ್ಪಾಟುಗಳು ಆಗುವುವು. ಬಿಡಿಯಾಗಿದ್ದಾಗ ಕೂಡಿಕೊಂಡಿದ್ದ ಪ್ರತ್ಯಯಗಳು ಬಹುಶಃ ಬಿದ್ದುಹೋಗುವುವು. ಮಾತ್ರವಲ್ಲ ಸಂಧಿಕಾರ್ಯಗಳಾದ ಲೋಪಾಗಮಾದೇಶಗಳು ಆಗುವುವು.

ಉದಾ:–

ಚಳಿಯ+ಕಾಲ=ಚಳಿಗಾಲ; ನೆರೆಯ+ಮನೆಯ+ಸುದ್ದಿ= ನೆರೆಮನೆಸುದ್ದಿ; ದನವೂ+ಕರುವೂ=ದನಕರುಗಳು; ಕಾಣಿಕೆಯನ್ನು+ಕೊಟ್ಟು=ಕಾಣಿಕೆಗೊಟ್ಟು.

ಕನ್ನಡದಲ್ಲಿ ತತ್ಪುರುಷ, ಕರ್ಮಧಾರಯ, ದ್ವಂದ್ವ ಸಮಾಸಗಳು ಮುಖ್ಯವು. ದ್ವಿಗು ಕ್ರಿಯಾಸಮಾಸಗಳು ಇವುಗಳೊಳಗೆ ಸೇರುವುವು.

ತತ್ಪುರುಷ ಸಮಾಸ: ಕೂಡುವ ಎರಡು ಪದಗಳಲ್ಲಿ ಉತ್ತರ ಪದದ ಅರ್ಥವು ಮುಖ್ಯವು. ಪೂರ್ವಪದದ ಪ್ರತ್ಯಯವು ಲೋಪವಾಗುವುದು.

ಮರವನ್ನು ಕಡಿಯುವವನು=ಮರಕಡಿಯುವವನು.

ಕಳೆಯನ್ನು ತುಂಬಿ=ಕಳೆದುಂಬಿ.

ತೃಪ್ತಿಯನ್ನು ಪಟ್ಟು=ತೃಪ್ತಿಬಟ್ಟು.

ತತ್ಪುರುಷ ಸಮಾಸದಲ್ಲಿ ಮೇಲಿನ ದೃಷ್ಟಾಂತಗಳಲ್ಲಿದ್ದಂತೆ ಉತ್ತರ ಪದವು ಕ್ರಿಯಾಪದವಾಗಿದ್ದರೆ ಈ ಸಮಾಸವನ್ನು ಕ್ರಿಯಾಸಮಾಸವೆನ್ನುವುದುಂಟು.

ತತ್ಪುರುಷಕ್ಕೆ ಬೇರೆ ಕೆಲವು ಉದಾಹರಣೆಗಳು:–

ಮಲ್ಲಿಗೆಯ ಹೂ=ಮಲ್ಲಿಗೆಹೂ

ಬಿಲ್ಲಿನಲ್ಲಿ ಜಾಣ=ಬಿಲ್ಜಾಣ.

ಚೋರಭಯ, ರಾಜಬಲ, ರಣಧೀರ ಇತ್ಯಾದಿ.

ಪೂರ್ವಪದವು ಪರಪದದ ವಿಶೇಷಣ ಎಂದರೆ ಅದನ್ನು ಕುರಿತು ವಿಶೇಷಗುಣವೇನಾದರೂ ತಿಳಿಸ ತಕ್ಕುದಿದ್ದರೆ ಆ ಸಮಾಸವು ಕರ್ಮಧಾರಯವೆನ್ನಿಸುವುದು. ಇದರಲ್ಲಿಯೂ ಉತ್ತರ ಪದದ ಅರ್ಥವೇ ಪ್ರಧಾನವು.

ಹೊಸದು ಕನ್ನಡ = ಹೊಸಗನ್ನಡ

ತಣ್ಣಿತ್ತು ಆದ ಗಾಳಿ = ತಂಗಾಳಿ

ಮೊಗವೆಂಬ ತಾವರೆ = ಮೊಗದಾವರೆ

ನೀಲಪಟ, ದುಃಖಾಗ್ನಿ, ಜ್ಯೇಷ್ಠಪುತ್ರ ಇತ್ಯಾದಿ.

ಕರ್ಮಧಾರಯದಲ್ಲಿ ಪೂರ್ವಪದವು ಸಂಖ್ಯಾವಾಚಕವಾದರೆ ಅದನ್ನು ದ್ವಿಗುಸಮಾಸವೆನ್ನುತ್ತಾರೆ.

ಎರಡು ಕಡೆ = ಇಕ್ಕಡೆ; ಎರಡು ಕೆಲ = ಇಕ್ಕೆಲ;

ಒಂದು ಕಟ್ಟು = ಒಕ್ಕಟ್ಟು; ಪಂಚವಟಿ, ತ್ರಿಲೋಕ. ಇತ್ಯಾದಿ.

ದ್ವಂದ್ವಸಮಾಸ: ಸಹಯೋಗ ತೋರುವಂತೆ ಎರಡು ಪದಗಳು ಸೇರಿ ಒಂದಾಗುವುದಕ್ಕೆ ದ್ವಂದ್ವಸಮಾಸವೆಂದು ಹೆಸರು. ಇಲ್ಲಿ ಸೇರುವ ಎರಡೂ ಪದಗಳ ಅರ್ಥವು ಪ್ರಧಾನವಾಗಿರುತ್ತದೆ.

ಮರವೂ ಗಿಡವೂ ಬಳ್ಳಿಯೂ = ಮರಗಿಡಬಳ್ಳಿಗಳು.

ತಂದೆಯೂ ತಾಯಿಯೂ ಮಗನೂ = ತಂದೆತಾಯಿಮಕ್ಕಳು.

ಅರಿಸಮಾಸ:— ಸಮಾಸವಾಗುವಾಗ ಕನ್ನಡ ಕನ್ನಡ ಪದಗಳೇ ಇಲ್ಲವೆ ಸಂಸ್ಕೃತ ಸಂಸ್ಕೃತ ಪದಗಳೇ ಒಟ್ಟು ಸೇರುವುವಲ್ಲದೆ ಕನ್ನಡ ಸಂಸ್ಕೃತ ಪದಗಳು ಒಟ್ಟು ಬೆರಕೆಯಾಗುವುದಿಲ್ಲ. ಹಾಗೆ ಕನ್ನಡ ಸಂಸ್ಕೃತ ಪದಗಳನ್ನು ಸಮಾಸ ಮಾಡಿದರೆ ಅದನ್ನು ಅರಿಸಮಾಸವೆನ್ನುತ್ತಾರೆ. ಅರಿಸಮಾಸವು ಒಂದು ದೋಷವೆಂದು ಅದನ್ನು ಬಿಟ್ಟುಬಿಡುವರು.

ಆದರೆ ಕ್ರಿಯಾಸಮಾಸದಲ್ಲಿಯೂ ಬಿರುದಾವಳಿಗಳಲ್ಲಿಯೂ, ಅರಿಸಮಾಸ ದೋಷವಿಲ್ಲ. ಪೂರ್ವಕವಿಗಳ ಕೆಲವು ಪ್ರಯೋಗ

ಗಳಲ್ಲಿ ಅರಿಸಮಾಸ ಕಂಡರೂ ಅವು ಕವಿಮನೋಹರಗಳೆಂದು ಮನ್ನಿಸಲ್ಪಡುವುವು.

ಬಿರುದಾವಳಿಗೆ—ಜಗದಟ್ಟಿದಲ್ಲಣರಾಯ, ರಾಯಮರ್ದನ ರಾಯ, ಕಂಟಕರಾಯರಾಯ ಇತ್ಯಾದಿ

ಪೂರ್ವಕವಿಪ್ರಯೋಗ—ತುರಗದಳ, ಕೂರಸಿ, ಮಳೆಗಾಲ, ಕಟ್ಟೇಕಾಂತ, ಕುಲಗೇಡಿ ಇತ್ಯಾದಿ.

ಅಭ್ಯಾಸ

ಕೆಳಗಣ ಸಮಾಸಗಳನ್ನು ಬಿಡಿಪದಗಳಾಗಿ ಬರೆಯಿರಿ:

ಒರೆಗಣ್ಣು; ತಾಯ್ನಾಡು; ಕಂದುಮೋರೆ; ಕನ್ನೈದಿಲೆ; ಮದುಮಗ; ಇಬ್ಬಾಯಕತ್ತಿ; ನೀರ್ಗುಡಿದಂ; ಇಕ್ಕೆಲ; ಆಟಪಾಟಕೂಟಗಳು; ರಾಜಪುತ್ರ; ರಣಧೀರ; ನೀಲಾಂಬುಜ.

ಎಂಟನೆಯ ಅಧ್ಯಾಯ

ನಾಮಪದ

ಹಿಂದೆ ಹೇಳಿದಂತೆ ಪ್ರಕೃತಿಗೆ ಪ್ರತ್ಯಯವು ಸೇರಿ ಪದವಾಗುವುದು.

ನಾಮಪ್ರಕೃತಿಗಳೂ ಎಂದರೆ ಮುಖ್ಯವಾಗಿ ವಸ್ತುನಾಮ ಗಳೂ ಪ್ರತ್ಯಯಗಳೂ ಸೇರಿ ನಾಮಪದಗಳಾಗುವುವು.

ನಾಮಪದಗಳಲ್ಲಿ—ರೂಢನಾಮ, ಅನ್ವರ್ಥನಾಮ, ಅಂಕಿತ ನಾಮ, ಸಂಘನಾಮ, ಭಾವನಾಮವೆಂದು ಐದು ವಿಧಗಳಿರುವುವು.

ರೂಢನಾಮಗಳೆಂದರೆ ರೂಢಿಯಾಗಿ, ಎಂದರೆ ವಾಡಿಕೆಯಾಗಿ ಬಂದ ಹೆಸರುಗಳು. ಉದಾ:—ಮನೆ, ಹೊಲ, ಮರ, ದನ, ಗುಡ್ಡ, ಕಾಡು, ಹುಲಿ, ಗಿಳಿ ಇತ್ಯಾದಿ.

ಅನ್ವರ್ಥನಾಮವೆಂದರೆ ಅರ್ಥಕ್ಕೆ ಅನುಸಾರವಾಗಿ ಬಂದ ನಾಮವು. ಒಬ್ಬನ ದೇಹದಲ್ಲಿ ಕಾಣುವ ಒಂದು ಕೊರತೆಯನ್ನು

ಇಲ್ಲವೆ ಒಬ್ಬನ ಚಾಳಿಯನ್ನು ಗ್ರಹಿಸಿ ಅದನ್ನು ಹೇಳುವ ಅರ್ಥದಿಂದ ಉಂಟಾದ ಶಬ್ದಗಳು. ಉದಾ:— ಕುಂಟ, ಕುರುಡ, ಹೆಳವ, ಕಿವುಡ, ಕೊಳಕ, ಕೆಂಚ ಇತ್ಯಾದಿ.

ಅಂಕಿತನಾಮಗಳೆಂದರೆ ಗುರುತಿಸುವುದಕ್ಕಾಗಿ ವ್ಯಕ್ತಿಗಳಿಗೆ ಇಟ್ಟ ಹೆಸರುಗಳು. ಉದಾ:—ಗೋಪಾಲ, ಶಂಕರ, ಸದಾಶಿವ, ಚಾರ್ಲಿ, ಉಮಾ, ಪಾರ್ವತಿ, ಮಂಗಳೂರು, ದಿಲ್ಲಿ, ಹಿಮಾಲಯ, ನೇತ್ರಾವತಿ ಇತ್ಯಾದಿ.

ರೂಢನಾಮಗಳನ್ನು ವರ್ಗನಾಮಗಳೆಂದೂ ಹೇಳಬಹುದು. ವಸ್ತುಗಳನ್ನು ಅವುಗಳ ಆಕಾರಗುಣಗಳಿಂದ ನಾವು ವರ್ಗ ವರ್ಗ ಗಳಾಗಿ ವಿಭಾಗಿಸಬಹುದು. ಹುಲಿ— ಆ ವರ್ಗಕ್ಕೆ ಹೇಳಿದ ಹೆಸರು. ಆ ವರ್ಗದ ಯಾವ ಪ್ರಾಣಿಗೂ ಇದೇ ಹೆಸರು. ಸರ್ಕಸ್ ಕಂಪೆನಿ ಯವರು ತರಬೇತು ಮಾಡಿದ ಹುಲಿಗಳನ್ನು ಗುರುತಿಸುವುದಕ್ಕೆ ಅವಕ್ಕೆ ಪಿಂಗಳ, ಮಂಗಳ, ಎಂದು ಮುಂತಾಗಿ ಹೆಸರು ಇಡಬಹುದು. ಆಗ ಇವು ಅಂಕಿತನಾಮಗಳಾಗುವುವು. ಈ ರೀತಿ ಅಂಕಿತನಾಮ ಗಳನ್ನು ದನಗಳಿಗೆ, ಬೆಳ್ಳಿ, ಮುಂತಾಗಿ; ಮನೆಗಳಿಗೆ ಸುಖನಿವಾಸ ಮುಂತಾಗಿ; ಅಂಗಡಿಗಳಿಗೆ ತಾಜಮಹಾಲ ಮುಂತಾಗಿ— ಹೆಚ್ಚೇಕೆ— ಯಾವ ವಸ್ತುವಿಗೂ ಗುರುತಿಸುವ ದೃಷ್ಟಿಯಿಂದ, ಇಡಬಹುದು.

ಸಂಘನಾಮ ವಸ್ತುಗಳ ಗುಂಪಿಗೆ ಇಟ್ಟ ಹೆಸರು.

ಉದಾ:— ಮಂದೆ, ಒಡ್ಡು, ಸೇನೆ, ಗೊನೆ, ತೆನೆ, ಇತ್ಯಾದಿ.

ಭಾವನಾಮ. ಕ್ರಿಯೆ ಎಂದರೆ ಭಾವನೆ. ಇದನ್ನು ಭಾವ ನಾಮವೆಂದು ಕರೆಯುವರು.

ಆಡು, ಕ್ರಿಯಾ; ಇದರ ಭಾವನಾಮ, ಆಟ. ಹಾಗೆಯೇ ತಿಳಿವು, ನಗೆ, ನೋಟ, ಕಾಟ, ತಾಳ್ಮೆ, ರಂಜನೆ, ಪಾಲನ, ಇತ್ಯಾದಿ.

ಗುಣಗಳನ್ನು ನಾವು ಗುಣಿಗಳಲ್ಲಿ ಕಾಣುವೆವು ಹೊರತು ಗುಣಿಗಳ ಹೊರಗೆ ಕಾಣಲು ಸಾಧ್ಯವಿಲ್ಲ.

ಕರಿದು, ಬಿಳಿದು— ಇವು ಗುಣವಾಚಕಗಳು.

ಕರಿಯ ಬೆಕ್ಕು, ಬಿಳಿಯ ಕಾಗದವೆಂಬಲ್ಲಿ ಇವು ಅವುಗಳ ಗುಣವನ್ನು ಹೇಳುವ ಗುಣವಾಚಕಗಳಾದುವು. ಈ ಗುಣಗಳನ್ನು ಆ ವಸ್ತುಗಳಿಂದ ಭಾವನೆಯಲ್ಲಿ ಬೇರ್ಪಡಿಸಿ ಆ ಭಾವಕ್ಕೆ ಇಟ್ಟ ಕಪ್ಪು, ಬಿಳಿಪು ಎಂಬ ಹೆಸರುಗಳು ಭಾವನಾಮಗಳಾದುವು. ಹೀಗೆಯೇ— ಶಾಂತಿ, ಸೌಂದರ್ಯ, ಭಯ ಇತ್ಯಾದಿ.

ನಾಮಪದಗಳನ್ನು ಅವಕ್ಕೆ ಇರುವ ಲಿಂಗ ವಚನ ವಿಭಕ್ತಿಗಳಿಂದ ತಿಳಿಯಬಹುದು.

ಲಿಂಗ

ಲಿಂಗ ಎಂದರೆ ಗಂಡು ಹೆಣ್ಣು ನಪುಂಸಕ ಎಂಬ ಭೇದಕಾಣಿಸುವ ಗುರುತು. ಪುರುಷವಾಚಕ ಶಬ್ದಗಳು ಪುಲ್ಲಿಂಗ, ಸ್ತ್ರೀವಾಚಕ ಶಬ್ದಗಳು ಸ್ತ್ರೀಲಿಂಗ. ಉಳಿದುವು ನಪುಂಸಕಲಿಂಗ.

ಪುಲ್ಲಿಂಗಕ್ಕೆ:- ಅಪ್ಪ, ಶಿವ, ಮದುಮಗ, ಮಾವ, ಹುಡುಗ ಇತ್ಯಾದಿ.

ಸ್ತ್ರೀಲಿಂಗಕ್ಕೆ:— ಅಮ್ಮ, ಗೌರಿ, ಮದುಮಗಳು, ಅತ್ತೆ, ಹುಡುಗಿ.

ನಪುಂಸಕಕ್ಕೆ:— ಕಲ್ಲು, ಮರ, ನದಿ, ಮನೆ, ಸಮುದ್ರ.

ಸಮುದ್ರ ನದಿ ಮುಂತಾದುವು ಸಂಸ್ಕೃತ ಭಾಷೆಯಲ್ಲಿ ಪುಲ್ಲಿಂಗ ಸ್ತ್ರೀಲಿಂಗವೆನ್ನಿಸಿದರೂ ಅವನ್ನು ಕನ್ನಡದಲ್ಲಿ ಉಪಯೋಗಿಸುವಾಗ ಕನ್ನಡ ಭಾಷಾ ಮರ್ಯಾದೆಯಂತೆ ಅವು ನಪುಂಸಕವಾಗಿಯೇ ಉಪಯೋಗವಾಗುವುವು.

ತೋರಿಕೆಗೆ ಗಂಡು, ಇಲ್ಲವೆ ಹೆಣ್ಣು ಎಂದು ಕಂಡರೂ ಅಲ್ಪಜ್ಞಾನಿಗಳೆಂದು ಕಾಣಿಸುವ ದೃಷ್ಟಿಯಿಂದ ಕೆಲವು ಶಬ್ದಗಳನ್ನು ನಪುಂಸಕವಾಗಿ ಹೇಳುವುದೂ ಉಂಟು.

ಉದಾ:— ಒಂದು ಆಳು ಬೇಕು, ಮಗು ಅಳುತ್ತದೆ. ಹುಡುಗಿ ಒಳಗೆ ಹೋಯಿತು ಇತ್ಯಾದಿ.

ಸೂರ್ಯ ಚಂದ್ರ ಗ್ರಹಗಳಿಗೆ ಪುಲ್ಲಿಂಗವನ್ನೂ ನಪುಂಸಕಲಿಂಗವನ್ನೂ ಹೇಳುವುದುಂಟು. ಉದಾ: – ಸೂರ್ಯ ಮೂಡಿದನು. ಸೂರ್ಯ ಮೂಡಿತು. ಶುಕ್ರ ಹೊಳೆಯುತ್ತಾನೆ. ಶುಕ್ರ ಹೊಳೆಯುತ್ತದೆ.

ಕೆಲವು ಸ್ತ್ರೀಲಿಂಗವಾಗಿಯೂ ನಪುಂಸಕಲಿಂಗವಾಗಿಯೂ ವ್ಯವಹಾರದಲ್ಲಿವೆ.

ಉದಾ: ದೇವತೆ ವರವನ್ನು ಕೊಟ್ಟಳು. ದೇವತೆ ವರವನ್ನು ಕೊಟ್ಟಿತು. ಹುಡುಗಿ ಚೆನ್ನಾಗಿ ಹಾಡುತ್ತಾಳೆ. ಹುಡುಗಿ ಚೆನ್ನಾಗಿ ಹಾಡುತ್ತದೆ.

ಮಗು ಶಬ್ದವನ್ನು ಮೂರು ಲಿಂಗಗಳಲ್ಲಿಯೂ, ಗಂಡು ಹೆಣ್ಣು ಭೇದಸೂಚನೆ ಮಾಡುವ ದೃಷ್ಟಿಯಿರುವಾಗ, ಇಲ್ಲವೆ ಏನೂ ತಿಳುವಳಿಕೆಯಿಲ್ಲದುದೆಂದು ಹೇಳುವಾಗ ಸಂದರ್ಭಕ್ಕೆ ಸರಿಯಾಗಿ ಹೇಳುವರು.

ಉದಾ: – ಮಗು ಊಟಕ್ಕೆ ಕುಳಿತಿದ್ದಾನೆ. ಮಗು ಹಿತ್ತಲಲ್ಲಿ ಆಡುತ್ತಾಳೆ. ಮಗು ಅಳುತ್ತದೆ.

ವಚನ

ಒಂದು ಅಥವಾ ಒಂದಕ್ಕಿಂತ ಹೆಚ್ಚು ಎಂದು ಹೇಳುವಲ್ಲಿ ಏಕವಚನ ಬಹುವಚನ ಪ್ರತ್ಯಯಗಳು ಬರುವುವು. ಕನ್ನಡದಲ್ಲಿ ವಚನಗಳು ಇವೆರಡೇ.

ಬಹುವಚನವಾಗುವಾಗ ಪ್ರಕೃತಿಗಳ ಮೇಲೆ ಒಂದು ಪ್ರತ್ಯಯವು ಬರುವುದು.

ಏಕ	ಬಹು
ಮಗು	ಮಕ್ಕಳು
ಮಗಳು	ಮಗಳಂದಿರು
ಹುಡುಗ	ಹುಡುಗರು.

ಬಹುವಚನ ಪ್ರತ್ಯಯಗಳಲ್ಲಿ ಗಳು, ಅಂದಿರು, ಅರು ಮುಖ್ಯವಾದುವುಗಳು.

ಸ್ತ್ರೀಪುರುಷ ವಾಚಕಗಳಾದ ನಾಮಪ್ರಕೃತಿಗಳ ಮೇಲೆ ಬಹುವಚನದಲ್ಲಿ ಅರು ಪ್ರತ್ಯಯವು ಬರುವುದು.

ಉದಾ:– ಹುಡುಗರು, ಹುಡುಗಿಯರು, ಸ್ತ್ರೀಯರು, ಮುದುಕರು, ಬಾಲಕರು ಇತ್ಯಾದಿ.

ಬಂಧುವಾಚಕಗಳ ಮೇಲೆ ಬಹುವಚನಕ್ಕೆ ಅಂದಿರು ಪ್ರತ್ಯಯವು ಬರುವುದು.

ಉದಾ:– ಅಣ್ಣಂದಿರು, ತಮ್ಮಂದಿರು, ಮಾವಂದಿರು, ಬಾವಂದಿರು ಇತ್ಯಾದಿ.

ನಪುಂಸಕ ಶಬ್ದಗಳ ಮೇಲೆ ಬಹುವಚನಕ್ಕೆ ಗಳು ಪ್ರತ್ಯಯವು ಬರುವುದು.

ಉದಾ:– ಮನೆಗಳು, ಹಳ್ಳಿಗಳು, ಕಾಡುಗಳು, ಊರುಗಳು ಇತ್ಯಾದಿ.

'ಗಳು' ಪ್ರತ್ಯಯವು ಪುಂಸ್ತ್ರೀಲಿಂಗ ಬಹುವಚನದಲ್ಲಿಯೂ ಬರುವುದುಂಟು. ತಂದೆಗಳು, ತಾಯಿಗಳು, ಗುರುಗಳು, ಹೆಣ್ಣುಗಳು, ನಾವುಗಳು ಇತ್ಯಾದಿ.

ಬಹುವಚನಸೂಚಕವಾಗಿ ಬಂದ ಅರು ಪ್ರತ್ಯಯದ ಮೇಲೆ ಪುನಃ ಗಳು ಪ್ರತ್ಯಯವು ಬರುವುದೂ ಉಂಟು.

ಉದಾ:– ರಾಜರುಗಳು, ದೇವರುಗಳು, ಸ್ತ್ರೀಯರುಗಳು ಇತ್ಯಾದಿ.

ವಿಭಕ್ತಿ

ವಿಭಕ್ತಿ ಪ್ರತ್ಯಯಗಳು ನಾಮಪದಕ್ಕೂ ಕ್ರಿಯಾಪದಕ್ಕೂ ಇರುವ ಸಂಬಂಧವನ್ನು ಸೂಚಿಸುವುವು; ಎಂದರೆ ಯಾವ ವಿಧದಲ್ಲಿ ಕ್ರಿಯೆಯೊಡನೆ ಸೇರುವುವೆಂಬುದನ್ನು ತಿಳಿಸುವುವು.

ರಾಮನು ಕಡಿದನು. ಇಲ್ಲಿ ರಾಮನು ಪ್ರಥಮಾ ವಿಭಕ್ತಿ. ರಾಮನಿಗೆ ಕ್ರಿಯೆಯೊಡನೆ ಇಲ್ಲಿ ಕರ್ತೃತ್ವ ಸಂಬಂಧವು. ಇಲ್ಲಿ ಉ ಪ್ರತ್ಯಯವು ಸೇರಿ ರಾಮನು ಎಂದಾಯಿತು.

ರಾವಾ, ಬಾ—ಇಲ್ಲಿಯೂ ರಾವಾ, ಪ್ರಥಮಾ ವಿಭಕ್ತಿ—ಇದು ಒಬ್ಬನನ್ನು ಸಂಬೋಧಿಸುವ ಇಲ್ಲವೆ, ಕರೆಯುವ ಅರ್ಥವುಳ್ಳದ್ದು. ಇದನ್ನು ಸಂಬೋಧನಾವಿಭಕ್ತಿ ಎನ್ನುವರು.

ರಾಮನು ಮರವನ್ನು ಕಡಿದನು. ಇಲ್ಲಿ ಮರವನ್ನು, ದ್ವಿತೀಯಾ ವಿಭಕ್ತಿ. ಕ್ರಿಯೆಯೊಡನೆ ಕರ್ಮತ್ವ ಸಂಬಂಧದಲ್ಲಿ ಸೇರುವುದು. ಅನ್ನು ಪ್ರತ್ಯಯವು ಸೇರಿ ಮರವನ್ನು ಎಂಬ ಕರ್ಮಪದ ವಾಯಿತು.

ರಾಮನು ಮರವನ್ನು ಕೊಡಲಿಯಿಂದ ಕಡಿದನು. ಇಲ್ಲಿ ಕೊಡಲಿಯಿಂದ, ತೃತೀಯಾ ವಿಭಕ್ತಿ. ಆ ಕ್ರಿಯೆ ಯಾವ ಕರಣ ದಿಂದಾಯಿತು ಎಂದು ಹೇಳುವುದು. ಕ್ರಿಯೆಯೊಡನೆ ಅದಕ್ಕೆ ಕರಣತ್ವ ಸಂಬಂಧವು. ಇಂದ ಪ್ರತ್ಯಯವು ಸೇರಿ ಕೊಡಲಿಯಿಂದ ಎಂಬ ಪದವಾಯಿತು.

ರಾಮನು ಮರಕ್ಕೆ ನೀರೆರೆದನು. ಇಲ್ಲಿ ಮರಕ್ಕೆ ಸಂಪ್ರದಾನ ವಿಭಕ್ತಿ. ಯಾರಿಗೆ ದಾನವಾಯಿತು, ಕೊಡಲ್ಪಟ್ಟಿತು ಎಂದು ತಿಳಿಸು ವುದು. ಕ್ಕೆ ಪ್ರತ್ಯಯ ಸೇರಿ ಮರಕ್ಕೆ ಎಂಬ ರೂಪವಾಯಿತು.

ರಾಮನು ಪೇಟೆಯಿಂದ ಬಂದನು. ಇಲ್ಲಿ ಪೇಟೆಯಿಂದ, ಪಂಚಮೀ ವಿಭಕ್ತಿ. ರಾಮನು ಎಲ್ಲಿಂದ ತೊಲಗಿದನೆಂದು ಹೇಳು ವುದು. ಆದುದರಿಂದ ಇದಕ್ಕೆ ಅಪಾದಾನ ವಿಭಕ್ತಿಯೆಂದು ಹೆಸರು. ಕರಣವಿಭಕ್ತಿಗೂ, ಅಪಾದಾನವಿಭಕ್ತಿಗೂ ಪ್ರತ್ಯಯರೂಪವು ಒಂದೇ. ಆದರೂ ಸಂದರ್ಭ ಬಲದಿಂದ ಎಲ್ಲಿ ಕರಣದ ಅರ್ಥವಾಗುವುದು ಎಲ್ಲಿ ತೊಲಗಿದನೆಂಬ ಅರ್ಥವಾಗುವುದು ಎಂಬುದನ್ನು ತಿಳಿಯು ವುದು ಕಷ್ಟವಲ್ಲ.

ರಾಮನ ಮನೆ—ರಾಮನ, ಷಷ್ಠೀ ವಿಭಕ್ತಿ. ಇದಕ್ಕೆ ಸಂಬಂಧ ವಿಭಕ್ತಿ ಎಂದು ಹೆಸರುಂಟು. ಮನೆಗೂ ರಾಮನಿಗೂ ಇರುವ ಸಂಬಂಧವನ್ನು ತಿಳಿಸುವುದು. ಇದರ ಪ್ರತ್ಯಯವು ಅ.

ರಾಮನಲ್ಲಿ ಭಕ್ತಿ ಇಡು. ಇಲ್ಲಿ ರಾಮನಲ್ಲಿ, ಸಪ್ತಮೀ ವಿಭಕ್ತಿ. ಆಧಾರವನ್ನು ಸೂಚಿಸುವುದರಿಂದ ಅಧಿಕರಣವೆಂದು ಇದಕ್ಕೆ ಹೆಸರು. ಅಲ್ಲಿ ಎಂಬುದು ಪ್ರತ್ಯಯವು.

ಈ ಏಳು ವಿಭಕ್ತಿಗಳಲ್ಲಿ ಸಂಬಂಧವನ್ನು ಹೇಳುವ ಷಷ್ಠೀ ವಿಭಕ್ತಿ ಹೊರತು ಉಳಿದ ಎಲ್ಲವೂ ಕ್ರಿಯೆಯನ್ನು ಆಗಗೊಳಿಸುವವು ಎಂಬುದರಿಂದ ಕಾರಕ ವಿಭಕ್ತಿಗಳೆಂದೂ ಕರೆಯಲ್ಪಡುವುವು.

ಅಭ್ಯಾಸ

ಇವುಗಳ ಬಹುವಚನ ರೂಪ ಬರೆಯಿರಿ: —

ತಾಯಿ, ಹೊಲ. ಕುಂಬಾರ, ದೊರೆ, ಕಾಲು. ಮಂಗ. ತಮ್ಮ ಹೊಸಬಳು.

ಇವುಗಳ ಏಕವಚನ ರೂಪ ಬರೆಯಿರಿ: —

ಮಕ್ಕಳು, ಭಾವಂದಿರುಗಳು, ಭಿಕ್ಷುಕರು. ಸೆಟ್ಟರು.

ಇವುಗಳ ಪುಲ್ಲಿಂಗವನ್ನು ಬರೆಯಿರಿ: – ರಾಣಿ. ಮಗಳು, ಬಾಲಿಕೆ.

ಇವುಗಳ ಸ್ತ್ರೀಲಿಂಗವನ್ನು ಬರೆಯಿರಿ: - ಅಗಸ, ಮಡಿವಾಳ, ಉಪಾಧ್ಯಾಯ.

ಕೆಳಗಣ ಮಾತುಗಳಲ್ಲಿ ಕರಣ ಮತ್ತು ಅಪಾದಾನ ವಿಭಕ್ತಿಯನ್ನು ಗುರುತಿಸಿರಿ.

ಮಂಗವು ಮರದಿಂದ ಮರಕ್ಕೆ ಹಾರಾಡುವ ಪ್ರಾಣಿ.

ಭೀಮನು ಮರದಿಂದ ಬಕಾಸುರನನ್ನು ಬಡಿದನು.

ಒಂಭತ್ತನೆಯ ಅಧ್ಯಾಯ

ಸರ್ವನಾಮ

ಸರ್ವರ ನಾಮಗಳ ಬದಲು ಉಪಯೋಗವಾಗುವ ನಾಮವೇ ಸರ್ವನಾಮವು.

ಕೃಷ್ಣ ಎಂಬುದರ ಬದಲು—ಅವನು.
ರಾಧೆ " " ಅವಳು.
ಕಲ್ಲು " " ಅದು

ಅವನು, ಅವಳು, ಅದು—ಇಲ್ಲಿ ಹೇಳಿದಂತೆ ಕೃಷ್ಣ ರಾಧೆ ಕಲ್ಲು - ಇವುಗಳ ಬದಲು ಮಾತ್ರ ಉಪಯೋಗವಲ್ಲ, ಬೇರೆ ಯಾರ ನಾಮಗಳ ಬದಲು ಉಪಯೋಗವಾಗಬಹುದು.

ರಾಮನು ಶಾಲೆಗೆ ಹೋದನು; ಅವನು ಕೊಡೆ ತರಲಿಲ್ಲ.

ಗೋಪಾಲನು ಮನೆಗೆ ಹೋದನು; ಅವನು ಹೋಗಿ ಒಂದು ಘಂಟೆ ಆಯಿತು.

ಹುಡುಗನು ಮಲಗಿದ್ದಾನೆ; ಅವನು ಬೇಗನೇ ಎದ್ದಾನು.

ಹೀಗೆ ಪುರುಷವಾಚಕವಾದ ಯಾರ ಹೆಸರಿನ ಬದಲಿಗೂ ಅವನು ಎಂಬ ಸರ್ವನಾಮವು ಉಪಯೋಗವಾಗುತ್ತದೆ.

ಹಿಂದಿನ ಮಾತುಗಳಲ್ಲಿ ಕಂಡಂತೆ ಒಬ್ಬನ ಹೆಸರನ್ನು ಪುನಃ ಪುನಃ ಉಚ್ಚಾರ ಮಾಡಲಿಕ್ಕಿರುವುದನ್ನು ಸರ್ವನಾಮವು ತಪ್ಪಿಸುತ್ತದೆ. ಇದೇ ಸರ್ವನಾಮದ ಪ್ರಯೋಜನವು.

ಸರ್ವನಾಮಗಳಲ್ಲಿ ಪುರುಷಾರ್ಥಕ, ಆತ್ಮಾರ್ಥಕ, ಪ್ರಶ್ನಾರ್ಥಕ ಮತ್ತು ನಿದರ್ಶಕವೆಂದು ನಾಲ್ಕು ವಿಧಗಳು.

ಅವುಗಳಲ್ಲಿ ಪುರುಷಾರ್ಥಕಗಳೇ ಮುಖ್ಯವು. ಪುರುಷಾರ್ಥಕ ಸರ್ವನಾಮಗಳೊಳಗೆ ಉತ್ತಮ, ಮಧ್ಯಮ, ಪ್ರಥಮ ಎಂಬ ಮೂರು ಭೇದಗಳಿವೆ.

	ಏಕ	ಬಹು
ಉತ್ತಮ	ನಾನು	ನಾವು
ಮಧ್ಯಮ	ನೀನು	ನೀವು
ಪ್ರಥಮ	ಪುಲ್ಲಿಂಗ – ಅವನು ಸ್ತ್ರೀಲಿಂಗ – ಅವಳು	ಅವರು
	ನಪುಂ. – ಅದು	ಅವುಗಳು

ನಾನು ಎಂಬುದು ಮಾತನಾಡುವ ವ್ಯಕ್ತಿಯ ಹೆಸರಿಗೆ ಬದಲು ಬರುವುದು. ಇದರ ಬಹುವಚನರೂಪ ನಾವು. ಇದು ಉತ್ತಮ ಪುರುಷ ಸರ್ವನಾಮವು.

ನಿಶ್ಚಯಕ್ಕೆ ನಾನು ಎಂಬ ಸರ್ವನಾಮಕ್ಕೆ ಬಹುವಚನ ಸಾಧ್ಯ ವಿಲ್ಲ. ಮಾತನಾಡುವ, ನಾನು ಎಂಬ ಶಬ್ದದಿಂದ ಅರ್ಥವಾಗುವ ವ್ಯಕ್ತಿ ಒಂದೇ–ಇನ್ನೊಂದು ಇಲ್ಲ. ಆದರೆ ವ್ಯಾಕರಣದಲ್ಲಿ **ನಾವು** ರೂಪವು ನಾನು ಎಂಬುದಕ್ಕೆ ಬಹುವಚನವೆಂದು ಸ್ವೀಕಾರವಾಗಿದೆ. ನಾವು ಎಂಬ ರೂಪವು ಕೆಲವು ವೇಳೆ ಬಹು ಮಾನವಾಚಕವಾದೀತು. ಬಹುವಚನದ ಅರ್ಥದಲ್ಲಿ ನಾನು ಮತ್ತು ಇತರರು ಎಂದು ತಿಳಿದುಕೊಳ್ಳಬೇಕು.

ಯಾರನ್ನು ಅಥವಾ ಏನನ್ನು ಕುರಿತು ಮಾತನಾಡಲ್ಪಡುತ್ತದೊ ಅವರ ಹೆಸರುಗಳ ಬದಲಾಗಿ ಬರುವ ಅವನು-ಅವಳು-ಅದು– ಇತ್ಯಾದಿ ಪ್ರಥಮಪುರುಷ ಸರ್ವನಾಮಗಳು.

ಇಂಗ್ಲಿಷ್ ವ್ಯಾಕರಣದಲ್ಲಿ ಇವನ್ನು Third Person ಎಂದು ಕರೆಯುವರು. ಇಲ್ಲಿ ಪ್ರಥಮ ಎಂದು ಹೇಳುವುದರಿಂದ ಕೆಲವರಿಗೆ ಗಲಿಬಿಲಿಯಾಗಬಹುದು. ಇತರರು ಮೊದಲನೆಯ ವಿಚಾರಕ್ಕೆ ಯೋಗ್ಯರೆಂಬ ಭಾವನೆಯಿಂದ ಪ್ರಥಮಪುರುಷ ಎಂಬ ಹೆಸರು ನಮ್ಮ ಭಾಷೆಗಳಲ್ಲಿ ವ್ಯವಹಾರಕ್ಕೆ ಬಂದಿರಬಹುದು.

ತಾನು ಮಾಡಿದ್ದು ಉತ್ತಮ ಎಂಬ ಗ್ರಹಿಕೆಯಿಂದ ನಾನು ನಾವು–ಉತ್ತಮಪುರುಷ ಎಂದು ಹೇಳಿದರೆಂದು ಗ್ರಹಿಸಬಹುದು.

ಈ ಇಬ್ಬರ ಮಧ್ಯೆ ಆಡುವ ಮಾತನ್ನು ಕೇಳುತ್ತಿರುವ ವ್ಯಕ್ತಿಯ ಹೆಸರಿನ ಬದಲು ಬರುವ ನೀನು, ನೀವು, ಮಧ್ಯಮ ಪುರುಷ ಎಂದಾಯಿತು.

ನಾಮಪದಗಳಿಗೆ ಹತ್ತುವ ಪ್ರತ್ಯಯಗಳೆಲ್ಲ ಸರ್ವನಾಮ ಗಳಿಗೂ ಹತ್ತುತ್ತವೆ.

ಉದಾ:—

ನಾನು ನನ್ನನ್ನು ನನ್ನಿಂದ ನನಗೆ ನನ್ನ ಇತ್ಯಾದಿ.
ಅವನು ಅವನನ್ನು ಅವನಿಂದ ..... ಇತ್ಯಾದಿ.
ಅವಳು ಅವಳನ್ನು ಅವಳಿಂದ ..... ಇತ್ಯಾದಿ.
ಅದು ಅದನ್ನು ಅದರಿಂದ ..... ಇತ್ಯಾದಿ.

ತಾನು, ತಾವು—**ಆತ್ಮಾರ್ಥಕ** ಸರ್ವನಾಮವು. ಇದು ವ್ಯಕ್ತಿಯ ಆತ್ಮವನ್ನು, ಎಂದರೆ ಸ್ವವ್ಯಕ್ತಿಯನ್ನು ಕುರಿತಾಗ ಉಪಯೋಗ ವಾಗುವುದು.

ರಾಮನು ರಾಮನ ಮನೆಗೆ ಹೋದನು. ಈ ಮಾತಿನಲ್ಲಿ ರಾಮ ಎಂಬ ಪದವನ್ನು ಪುನಃ ಹೇಳುವುದರ ಬದಲು ಅವನ ಎಂಬ ಸರ್ವನಾಮ ಹಾಕಬಹುದು. ಆಗ, ರಾಮನು ಅವನ ಮನೆಗೆ ಹೋದನು, ಎಂಬ ಮಾತಾಗುವುದು. ಆದರೆ, **ಅವನ** ಎಂಬುದಕ್ಕೆ ರಾಮನ ಎಂಬ ಅರ್ಥವು ಸ್ಪಷ್ಟವಾಗುವುದಿಲ್ಲ—ಅದು ಇನ್ನೊಬ್ಬನ ಮನೆಗೆಂದೂ ಅರ್ಥವಾಗಬಹುದು. ಈ ಕೊರತೆಯನ್ನು ತಪ್ಪಿಸು ವುದಕ್ಕೆ ಆತ್ಮಾರ್ಥಕ ಸರ್ವನಾಮವು ಒದಗುತ್ತದೆ—ರಾಮನು **ತನ್ನ** ಮನೆಗೆ ಹೋದನು. ತನ್ನ ಶಬ್ದದಿಂದ ರಾಮನ ಎಂಬ ಅರ್ಥವು ಸ್ಪಷ್ಟವಾಯಿತು.

'ತಾವು ಯಾವಾಗ ಮನೆಗೆ ಹೋಗುತ್ತೀರಿ'—ಇಲ್ಲಿ ತಾವು ಪದಕ್ಕೆ ಬಹುಮಾನಾರ್ಥವೂ ಉಂಟು.

ಪ್ರಶ್ನಾರ್ಥಕ ಸರ್ವನಾಮವು ಪ್ರಶ್ನೆ ಕೇಳುವಲ್ಲಿ ಉಪಯೋಗವಾಗುವುದು.

ಉದಾ:— ಯಾರು ಏನು ಯಾವನು ಯಾವಳು ಇತ್ಯಾದಿ.

ಯಾವ ವಸ್ತುನಾಮವನ್ನು ಕುರಿತು ಪ್ರಶ್ನೆಯೊ, ಆ ವಸ್ತುವಿನ ಹೆಸರನ್ನು ಉದ್ದೇಶಿಸಿ ಬರುವ ಪ್ರಶ್ನರೂಪವಾದುದರಿಂದ ಅದು ಪ್ರಶ್ನಾರ್ಥಕ ಸರ್ವನಾಮವೆಂದು ಕರೆಯಲ್ಪಡುವುದು.

ನಿದರ್ಶಕ ಸರ್ವನಾಮವೆಂದರೆ:— ಬೆರಳಿಂದ ಅಥವಾ ಕಣ್ಸನ್ನೆಯಿಂದ ತೋರಿಸುವುದಕ್ಕೆ ಉಪಯೋಗವಾಗುವ ಸರ್ವನಾಮಗಳು. ಯಾರನ್ನು ನಿರ್ದೇಶಿಸುವೆವೊ ಅವರ ಹೆಸರ ಬದಲಾಗಿ ಇವು ಉಪಯೋಗವಾಗುವುವು.

ಅವನು, ಇವನು, ಅದು ಮೊದಲಾದ ಪುರುಷಾರ್ಥಕ ಸರ್ವನಾಮಗಳೇ ಇಲ್ಲಿಯೂ ಉಪಯೋಗವಾಗುವುವು.

ಅವು ಎಲ್ಲಿ ಪುರುಷಾರ್ಥಕ, ಎಲ್ಲಿ ನಿದರ್ಶಕ ಎಂದು ಸುಲಭದಲ್ಲಿ ತಿಳಿದುಕೊಳ್ಳಬಹುದು.

ಉದಾ:- ಅವ್ವ ಬಾಯಲಿ ಆಡಬಲ್ಲಳು; **ಅವಳು** ನೋಡಿದ ನೋಟವೇ ಸನ್ನೆದೆಯನಿರಿಯಿತು.

ವಾಕ್ಯದಲ್ಲಿ, ಮೊದಲು ಹೇಳಲ್ಪಟ್ಟ ಅವ್ವ ಶಬ್ದವನ್ನು ಪುನಃ ಆಡುವ ಬದಲಾಗಿ ಅವಳು ಎಂಬ ಪುರುಷಾರ್ಥಕ ಸರ್ವನಾಮವು ಇಲ್ಲಿ ಉಪಯೋಗವಾಗಿದೆ.

ಇವನವಂತೀಶ್ವರನು, ನಿಡುದೋಳವನು, ಹೇರುರದವನು.

ಇಲ್ಲಿ ಇವನು ಎಂಬುದು ಅವಂತೀಶ್ವರವನ್ನು ಕಾಣಿಸುವುದಕ್ಕೆ ಉಪಯೋಗವಾದುದಾಗಿ ನಿದರ್ಶಕ ಸರ್ವನಾಮವು.

ಸ್ವಯಂವರಶಾಲೆಯಲ್ಲಿ ಇಂದುಮತಿಗೆ ಆಕೆಯ ಪಡಿಯರಿತಿ ಸುನಂದೆ ರಾಜರನ್ನು ಕಾಣಿಸುತ್ತಿರುವಾಗ ಆಡುವ ಮಾತದು. ಬಹುಶಃ ಕಣ್ಸನ್ನೆಯಿಂದ ನಿರ್ದೇಶಿಸಿ ಮಾತನಾಡಿರಬಹುದು.

ಅಭ್ಯಾಸ

ಕೆಳಗಿನ ಮಾತುಗಳಲ್ಲಿ ಕಾಣುವ ಸರ್ವನಾಮಗಳನ್ನು ಹೆಕ್ಕಿ ತೆಗೆದು, ಅವು ಯಾವುದರ ಬದಲಾಗಿ ಉಪಯೋಗವಾಗಿವೆಯೆಂದು ತಿಳಿಸಿರಿ:—

ಭೀಮ:—ಮಹಾಭಾರತದಲ್ಲಿ ಕ್ಲೇಶಪಟ್ಟವರು ನಾವು. ಹೆಂಗಸರಲ್ಲಿ ನೀನು; ಗಂಡಸರಲ್ಲಿ ನಾನು. ನಿನ್ನ ಇಚ್ಛೆಯನ್ನು ಸಾಧಿಸಿಕೊಡುತ್ತೇನೆ. ಅಶ್ವತ್ಥಾಮನು ಎಲ್ಲಿಗೆ ತಾನೇ ಹೋದಾನು?

ತಾನಾಜಿ ರಾಯಘಡಕ್ಕೆ ಬಂದೊಡನೆ ತನಗೆ ಏನು ಅಪ್ಪಣೆ ಎಂದು ಶಿವಾಜಿಯೊಡನೆ ಕೇಳಿದನು. ಶಿವಾಜಿಯು ತನ್ನ ತಾಯ ಕಡೆಗೆ ಬೆರಳು ತೋರಿಸಿ ಆಕೆಯೇ ಅವನಿಗೆ ಅಂದು ಅಪ್ಪಣೆ ಕೊಡತಕ್ಕವಳೆಂದನು.

ಹತ್ತನೆಯ ಅಧ್ಯಾಯ

ಧಾತುಗಳು—ಕ್ರಿಯಾಪದಗಳು

ಕ್ರಿಯೆಯನ್ನು ಹೇಳುವ ಪದವು ಕ್ರಿಯಾಪದವು. ಕ್ರಿಯಾಪದದ ಮೂಲರೂಪಕ್ಕೆ **ಧಾತು** ಎಂದು ಹೆಸರು. ಧಾತುಗಳಿಗೆ ಪ್ರತ್ಯಯಗಳು ಸೇರಿ ಕ್ರಿಯಾಪದಗಳಾಗುವುವು. ಕ್ರಿಯಾಪದಗಳಾಗುವುದಕ್ಕೆ ಧಾತುಗಳ ಮೇಲೆ ಹತ್ತುವ ಪ್ರತ್ಯಯಗಳಿಗೆ ಆಖ್ಯಾತ ಪ್ರತ್ಯಯಗಳೆಂದು ಹೆಸರು.

ಧಾತುಗಳಲ್ಲಿ ಎರಡು ವಿಧ. ಮೂಲಧಾತುಗಳು ಮತ್ತು ಹೊಸ ಧಾತುಗಳು.

ಮೂಲಧಾತುಗಳು:— ಕಾ, ಸಾಕು, ಇಕ್ಕು, ಹೋಗು, ತೂಗು, ಮೆಚ್ಚು, ಹಂಚು, ಅಂಜು, ಈಜು, ಕಟ್ಟು, ಕುಟ್ಟು, ಹುಟ್ಟು, ನುಡಿ, ಕೊಡು ಇತ್ಯಾದಿ.

ಇವು ಭಾಷೆಯಲ್ಲಿ ಮೂಲದಿಂದ ಇದ್ದ ಧಾತುಗಳು. ಭಾಷೆ ಬೆಳೆಯುತ್ತಿದ್ದ ಹಾಗೆ ಹೊಸ ಭಾವಗಳ ಅಗತ್ಯವಾಗಿ ಹೊಸ ಧಾತುಗಳು ಬಳಕೆಗೆ ಬಂದುವು.

ಕೆಲವು ನಾಮವಾಚಕಗಳಿಗೆ ಮತ್ತು ಅನುಕರಣಗಳಿಗೆ ಇಸು ಪ್ರತ್ಯಯ ಸೇರಿ ಹೊಸ ಧಾತುಗಳಾಗುವುವು.

ಉದಾ: – ಕಳವಳಿಸು, ಉಬ್ಬರಿಸು, ಚಡಪಡಿಸು, ಗಮಗಮಿಸು ಇತ್ಯಾದಿ.

ಕೆಲವು ಸಂಸ್ಕೃತ ಶಬ್ದಗಳು ಇಸು ಪ್ರತ್ಯಯ ಹೊಂದಿ ಹೊಸ ಧಾತುಗಳಾಗುವುವು.

ಉದಾ:– ಯತ್ನಿಸು, ಸುಖಿಸು, ದುಃಖಿಸು, ನಿರ್ಣಯಿಸು ಇತ್ಯಾದಿ.

ಪಾಲನ ಮುಂತಾದ ಸಂಸ್ಕೃತ ಶಬ್ದಗಳಿಗೆ ಇಸು ಸೇರುವಾಗ ಅವುಗಳ ಅನ ಅಣಗಳಿಗೆ ಲೋಪ ಬಹುಶಃ ಬರುವುದು.

ಉದಾ:—ಪಾಲನ+ಇಸು=ಪಾಲಿಸು; ರಕ್ಷಣ+ಇಸು= ರಕ್ಷಿಸು; ಭಜನ+ಇಸು=ಭಜಿಸು; ಚಲನ+ಇಸು=ಚಲಿಸು; ಸ್ಮರಣ+ಇಸು=ಸ್ಮರಿಸು ಇತ್ಯಾದಿ.

ಕೆಲವು ಕಡೆಗಳಲ್ಲಿ ಲೋಪ ಬಾರದಿರುವುದೂ ಉಂಟು.

ಉದಾ:—ಗಮನ+ಇಸು=ಗಮನಿಸು.

ಇವೆಲ್ಲವೂ ಸ್ವಯಂಕರ್ತೃಕಾರ್ಥದಲ್ಲಿ, ಎಂದರೆ ತಾನೇ ಕರ್ತೃವಾಗಿ ಮಾಡುವವನೆಂಬ ಅರ್ಥದಲ್ಲಿ ಉಪಯೋಗವಾಗುವುವು.

ಎಲ್ಲಾ ಧಾತುಗಳ ಮೇಲೆ ಪ್ರೇರಣಾರ್ಥದಲ್ಲಿ ಎಂದರೆ ಇತರರಿಂದ ಕೆಲಸವನ್ನು ಮಾಡಿಸುವುದೆಂಬ ಅರ್ಥದಲ್ಲಿ **ಇಸು** ಪ್ರತ್ಯಯವು ಸೇರುವುದು. ಹೊಸ ಧಾತುವಾಗಿ ಮೊದಲೇ ಇಸುವನ್ನು ಹೊಂದಿದ್ದುದಾದರೆ ಪ್ರೇರಣಾರ್ಥಕ ಇಸು ಸೇರುವಾಗ ಮೊದಲಿದ್ದ ಇಸು ಪ್ರತ್ಯಯವು ಲೋಪವಾಗುವುದು.

ಪ್ರೇರಣಾರ್ಥದಲ್ಲಿ:—ಮಾಡಿಸು, ಆಡಿಸು, ಓಡಿಸು, ಉಣಿಸು ಇತ್ಯಾದಿ.

ಇಸು ಲೋಪಕ್ಕೆ:—ಕಲಿಸು+ಇಸು=ಕಲಿಸು; ಪೂಜಿಸು+ ಇಸು=ಪೂಜಿಸು ಇತ್ಯಾದಿ.

ಸ್ವಯಂಕರ್ತೃಕಾರ್ಥದಲ್ಲಿ:—ಅವರು ನಮಗೆ ಚೆನ್ನಾಗಿ ಬುದ್ಧಿ ಕಲಿಸಿದರು.

ಪ್ರೇರಣಾರ್ಥದಲ್ಲಿ:—ಭೀಷ್ಮಾಚಾರ್ಯರು ಪಾಂಡವ ಕೌರವ ರಿಗೆ ದ್ರೋಣಾಚಾರ್ಯನಿಂದ ವಿದ್ಯೆ ಕಲಿಸಿದರು.

ಧಾತುಗಳಲ್ಲಿ ಅಕರ್ಮಕ ಸಕರ್ಮಕಗಳೆಂದು ಎರಡು ವಿಧಗಳು.

ಅಕರ್ಮಕ ಧಾತುವಿಗೆ ಕರ್ಮದ ಅಪೇಕ್ಷೆಯಿಲ್ಲ. ಕ್ರಿಯಾ ಫಲವು–ಪ್ರಯೋಜನವು ಕರ್ತೃವಿಗೆ ಹೊರತು ಮಿಕ್ಕ ಯಾರಿಗೂ ಇಲ್ಲ.

ಉದಾ:—ನಾನು ಹೋಗುತ್ತೇನೆ. ಸೇವಕನು ಅಲ್ಲಿ ಮಲಗು ತ್ತಾನೆ. ಈ ಕ್ರಿಯೆಗಳಿಂದ ಆಗುವ ಯಾವ ಪ್ರಯೋಜನವಾದರೂ ಕರ್ತೃವಿಗೆ. ಕ್ರಿಯಾಫಲ ಹೊಂದುವುದಕ್ಕೆ ಮತ್ತೊಂದು ವ್ಯಕ್ತಿ ಇಲ್ಲ. ಇಂತಹ ಧಾತುಗಳು ಅಕರ್ಮಕಗಳು.

ಸಕರ್ಮಕ ಧಾತುವಿಗೆ ಕರ್ಮಪದವು ಅಗತ್ಯವಿದೆ.

ರಾಮು ಗೋಪುವನ್ನು ಹೊಡೆದನು.

ಅವನು ತೋಟಕ್ಕೆ ನೀರನ್ನು ಬಿಟ್ಟನು.

ಇಲ್ಲಿ ಹೊಡೆದನು ಬಿಟ್ಟನು ಎಂಬ ಕ್ರಿಯೆಗಳಿಗೆ ಕರ್ಮದ ಅಪೇಕ್ಷೆಯುಂಟು. ಈ ಕ್ರಿಯೆಗಳ ಫಲ ಪ್ರಾಪ್ತಿಗೆ ಎಂದರೆ ಕರ್ಮ ವನ್ನು ಹೊಂದುವುದಕ್ಕೆ ಅಲ್ಲಿ ಗೋಪು; ನೀರು ಇವೆ. ಈ ರೀತಿ ಕರ್ಮವನ್ನು ತಾಳುವುದರಿಂದಲೇ ಸಕರ್ಮಕವೆಂಬ ಹೆಸರು ಇವಕ್ಕೆ ಬಂದಿತು.

ಒಂದು ಧಾತು ಅಕರ್ಮಕವೋ ಸಕರ್ಮಕವೋ ಎಂದು ತಿಳಿ ಯುವುದಕ್ಕೆ ಕ್ರಿಯೆಗೆ–ಏನನ್ನು, ಯಾರನ್ನು ಎಂಬ ಪ್ರಶ್ನೆ

ಮಾಡಿದರಾಯಿತು. ಆ ಪ್ರಶ್ನೆಗೆ ಉತ್ತರ ದೊರೆಯದಿದ್ದರೆ ಅದು ಅಕರ್ಮಕ; ಅದಕ್ಕೆ ಉತ್ತರ ದೊರೆತರೆ ಅದು ಸಕರ್ಮಕ.

ಹೊಡೆದನು	— ಯಾರನ್ನು?	ಗೋಪುವನ್ನು	ಸಕರ್ಮಕ
ಬಿಟ್ಟನು	— ಏನನ್ನು?	ನೀರನ್ನು	" "
ಹೋದನು	— ಏನನ್ನು?	ಉತ್ತರವಿಲ್ಲ	ಅಕರ್ಮಕ
ಮಲಗುತ್ತಾನೆ	— ಏನನ್ನು?	ಉತ್ತರವಿಲ್ಲ	"

ಕ್ರಿಯಾಪದಗಳು

ಧಾತುಗಳು ಆಖ್ಯಾತ ಪ್ರತ್ಯಯಗಳನ್ನು ಹೊಂದಿ ಕ್ರಿಯಾಪದಗಳಾಗುವುವು. ಕಾಲದೃಷ್ಟಿಯಿಂದ ಕ್ರಿಯಾಪದಗಳಲ್ಲಿ ಮೂರು ರೂಪಗಳುಂಟು. ಇವು ವರ್ತಮಾನ, ಭೂತ, ಭವಿಷ್ಯದ್ರೂಪಗಳು.

ವರ್ತಮಾನ ಎಂದರೆ ಈಗ ನಡೆಯುತ್ತಿರುವ ಕಾಲರೂಪ. ಭೂತವೆಂದರೆ ಕಳೆದುಹೋದ ಕಾಲದ ರೂಪ. ಭವಿಷ್ಯದ್ರೂಪವೆಂದರೆ ಮುಂದೆ ಆಗುವ ಕ್ರಿಯಾರೂಪ.

ವರ್ತಮಾನ — ರಾಮನು ಓದುತ್ತಾನೆ.

ಭೂತ — ರಾಮನು ಓದಿದನು.

ಭವಿಷ್ಯತ್ — ರಾಮನು ಓದುವನು.

ಧಾತುಗಳಿಗೆ ಸೇರುವ ಪ್ರತ್ಯಯಗಳು ಕಾಲ ಲಿಂಗ ವಚನಗಳಿಗೆ ತಕ್ಕಂತೆ ಬೇರೆಯಾಗುತ್ತವೆ. ಧಾತುಗಳಿಗೂ ಪ್ರತ್ಯಯಗಳಿಗೂ ನಡುವೆ, ವರ್ತಮಾನದಲ್ಲಿ **ಉತ್ತ**, ಭೂತಕಾಲದಲ್ಲಿ ದ, ಭವಿಷ್ಯತ್ಕಾಲದಲ್ಲಿ ವ ಎಂಬ ಪ್ರತ್ಯಯಗಳು ಸೇರುವುವು. ಇವಕ್ಕೆ ವಿಕರಣ ಪ್ರತ್ಯಯಗಳು ಎಂದು ಹೆಸರು.

ಕರೆ ಎಂಬ ಧಾತುವಿನ ಪ್ರಥಮಪುರುಷ, ಪುಲ್ಲಿಂಗ, ಏಕವಚನಕ್ಕೆ ವರ್ತಮಾನ, ಭೂತ, ಭವಿಷ್ಯದ್ರೂಪಗಳು:—

	ವರ್ತಮಾನ	ಕರೆ+ಉತ್ತ+ಅನೆ=ಕರೆಯುತ್ತಾನೆ.
	ಭೂತ	ಕರೆ+ದ+ಅನು =ಕರೆದನು.
	ಭವಿಷ್ಯತ್	ಕರೆ+ವ+ಅನು =ಕರೆವನು.
ಮಧ್ಯಮ ಪುರುಷ,	ವರ್ತಮಾನ	ಕರೆ+ಉತ್ತ+ಈಯೆ =ಕರೆಯುತ್ತೀಯೆ.
		ಕರೆ+ಉತ್ತ+ಇ =ಕರೆಯುತ್ತಿ.
	ಭೂತ	ಕರೆ+ದ+ಎ =ಕರೆದೆ.
	ಭವಿಷ್ಯತ್	ಕರೆ+ವ+ಎ =ಕರೆವೆ.
ಉತ್ತಮ ಪುರುಷ,	ವರ್ತಮಾನ	ಕರೆ+ಉತ್ತ+ಏನೆ=ಕರೆಯುತ್ತೇನೆ.
	ಭೂತ	ಕರೆ+ದ+ಎನು =ಕರೆದೆನು.
	ಭವಿಷ್ಯತ್	ಕರೆ+ವ+ಎನು =ಕರೆವೆನು.

ಬೇರೆ ರೂಪಗಳನ್ನು ಇದರಂತೆ ಹುಟ್ಟಿಸುವುದು.

ಅಭ್ಯಾಸ

ಕೆಳಗಣ ಮಾತುಗಳಲ್ಲಿ ಬರುವ ಕ್ರಿಯಾಪದಗಳ ಧಾತುಗಳನ್ನು ಹೇಳಿರಿ. ಅದು ಮೂಲ ಧಾತುವೊ ಹೊಸ ಧಾತುವೊ ಪ್ರೇರಣಾರ್ಥವೊ ತಿಳಿಸಿರಿ:—

ನಿನ್ನ ಕಣ್ಣುಗಳು ಪಂಜಿನಂತೆ ಉರಿಯುತ್ತಿವೆ, ಬಾರಯ್ಯ
ಆಯಾಸ ಪರಿಹರಿಸಿಕೊ.
ಹೇ! ಶ್ರೀನಿವಾಸ, ಸ್ವರ್ಗದ ದಾರಿ ಕಾಣಿಸು.
ಹಾಡುವ ಬಾಯೊಳು ಮಣ್ಣನು ಹೊಯ್ದೆ.
ಅಡವಿಯೊಳೀಪರಿ ಕೆಡೆವರೆ ವೀರಾ!
ಕವಿಯೆದೆಯೊಳದು ಹಾಡಾಗಿ ರಂಜಿಸಿತು.

ಹನ್ನೊಂದನೆಯ ಅಧ್ಯಾಯ

ವಿಶೇಷಣಗಳು

ಗುಣವಾಚಕವು ವಸ್ತುವಿನ ಗುಣವನ್ನು ಹೇಳುವ ಪದವು. ಇದಕ್ಕೆ ನಾಮವಿಶೇಷಣವೆಂದೂ ಹೆಸರುಂಟು. ವಿಶೇಷಣವೆಂದರೆ

ಹೆಚ್ಚಾಗಿ ಹೇಳುವುದು ಎಂದು ಅರ್ಥವು. ಗುಣವಾಚಕವು ವಸ್ತುವಿನ ಗುಣವಿಶೇಷವನ್ನು ತಿಳಿಸುವುದು.

ಗುಣವಾಚಕವು ಯಾವ ಪದದ ಗುಣವನ್ನು ಹೇಳುತ್ತದೊ ಆ ಪದವನ್ನು **ಗುಣಿ** ಎಂದು ಹೇಳುವರು. ಗುಣವಾಚಕವನ್ನು ವಿಶೇಷಣ ಎಂದು ಹೇಳುವಂತೆ ಗುಣಿಯನ್ನು ವಿಶೇಷ್ಯ ಎಂದು ಹೇಳುವುದುಂಟು.

ಗುಣವಾಚಕಗಳು ನಾಮಗಳಂತೆ ಪ್ರಕೃತಿ ರೂಪದಲ್ಲಿರತಕ್ಕವು. ವಾಕ್ಯದೊಳಗೆ ಸೇರುವಾಗ ನಾಮಪದಗಳಿಗೆ ಬಂದಂತೆ ಅವುಗಳಿಗೂ ವಿಭಕ್ತಿ ಲಿಂಗ ವಚನ ಪ್ರತ್ಯಯಗಳು ಹತ್ತುವುವು.

ಉದಾ:— ಗುಣವಾಚಕ: ಕಿರಿದು, ಹಿರಿದು, ಕರಿದು, ಬಿಳಿದು ಇತ್ಯಾದಿ.

ಇವುಗಳಿಗೆ ವಿಭಕ್ತಿ ಪ್ರತ್ಯಯಗಳು ಹತ್ತುವ ಕ್ರಮ:—

ಕಿರಿದು ಕಿರಿದನ್ನು ಕಿರಿದರಿಂದ ಕಿರಿದಕ್ಕೆ ಇತ್ಯಾದಿ.

ಲಿಂಗ ವಚನ ಹತ್ತುವಾಗ, ಅವನು, ಅವಳು, ಅದು, ಅವರು ಸೇರುವುದು.

ಉದಾ:— ಕಿರಿದು, ಕಿರಿಯವನು, ಕಿರಿಯವಳು, ಕಿರಿಯರು ಇತ್ಯಾದಿ.

ಗುಣಿಗೆ ಇರುವ ಲಿಂಗ ವಚನ ವಿಭಕ್ತಿಯೇ ಗುಣವಾಚಕಕ್ಕೂ ಬರುವುದೆಂದು ತಿಳಿಯತಕ್ಕದು. ವಿಶೇಷಣವಾಗಿ ಬರುವಾಗ ಸಮಾಸ ವಿಧಿಯಿಂದ ಪ್ರತ್ಯಯಗಳು ಲೋಪವಾಗಬಹುದು.

ಕಿರಿಗೂಸು ಅಳುತ್ತದೆ. ಕಿರಿದು (ಆದ) ಕೂಸು = ಕಿರಿಗೂಸು.

ಅವನು ನಮ್ಮ ಹಿರಿಮಗ.— ಇಲ್ಲಿ ಹಿರಿಯವನು ಮಗ=ಹಿರಿಮಗ ಎಂದು ತಿಳಕೊಳ್ಳಬೇಕು.

ನಾಮಪದದ ಷಷ್ಠೀ ವಿಭಕ್ತಿ ಸಂಬಂಧ ವಿಶೇಷವನ್ನು ಹೇಳುವುದರಿಂದ ಅದನ್ನು ನಾಮಪದವಿಶೇಷಣವೆನ್ನುತ್ತಾರೆ.

ಮರದ ಪೆಟ್ಟಿಗೆ, ಚಿನ್ನದ ಬಳೆ, ಮಾವಿನ ಕಾಯಿ ಇತ್ಯಾದಿ.

ಸಂಖ್ಯೆಗಳು ವಸ್ತುಗಳ ಲೆಕ್ಕ ತಿಳಿಸುವುದರಿಂದ ಅವು ನಾಮ ವಿಶೇಷಣಗಳಾಗುವುವು.

ಉದಾ:– ಹತ್ತು ಮಾವುಗಳು; ಐದನೆಯ ತರಗತಿ.

ಕ್ರಿಯಾವಿಶೇಷಣ

ಕ್ರಿಯೆಗೆ ವಿಶೇಷಣವಾಗಿ ಬರುವ ಪದವು ಕ್ರಿಯಾವಿಶೇಷಣವು. ಕ್ರಿಯೆ ಆದ ಸ್ಥಳ, ಕಾಲ, ರೀತಿಗಳನ್ನು ಅವು ತಿಳಿಸುವುದರಿಂದ ಅವುಗಳನ್ನು ಕ್ರಮವಾಗಿ ಸ್ಥಳವಾಚಕ, ಕಾಲವಾಚಕ, ರೀತಿವಾಚಕಗಳೆಂದು ಕರೆಯುವರು.

ಕ್ರಿಯಾವಿಶೇಷಣಗಳು ಅವ್ಯಯಗಳು. ಅವ್ಯಯಗಳು ಎಂದರೆ ವ್ಯಯವಿಲ್ಲದವು ಎಂದು ಅರ್ಥ, ಎಂದರೆ ಅವು ಆ ರೂಪದಲ್ಲಿ ವಾಕ್ಯದೊಳಗೆ ಸೇರುವುವು. ಅವುಗಳ ರೂಪ ಮತ್ತೆ ವಿಕಾರವಾಗತಕ್ಕದ್ದಿಲ್ಲ.

ಸ್ಥಳವಾಚಕ:– ಒಳಗೆ, ಹೊರಗೆ, ಕೆಳಗೆ, ಮೇಲೆ, ಸುತ್ತ, ಅತ್ತ, ಇತ್ತ, ಆಚೆ, ಈಚೆ, ಮುಂದು, ಹಿಂದು ಇತ್ಯಾದಿ.

ಅವನು ಒಳಗೆ ಬಂದನು. ಮೇಲೆ ನೋಡು. ಇತ್ತ ಬಾ, ಹಿಂದು ಮುಂದು ನೋಡಬೇಡವೇ?

ಕಾಲವಾಚಕ:– ಬೆಳಗ್ಗೆ, ಹೊತ್ತಾರೆ, ನಾಳೆ, ಸಂಜೆ, ಮುಂಜಾನೆ ಇತ್ಯಾದಿ.

ಉದಾ:– ರಾಮನು ಹೊತ್ತಾರೆ ಎದ್ದನು. ಅವನು ನಿನ್ನೆ ಬಂದನು ಇತ್ಯಾದಿ.

ರೀತಿವಾಚಕ:– ಮೆಲ್ಲಗೆ, ಬೇಗನೆ, ಚುರುಕಾಗಿ, ಗಟ್ಟಿಯಾಗಿ, ಸುಮ್ಮನೆ ಇತ್ಯಾದಿ.

ಉದಾ:– ಮೆಲ್ಲಗೆ ಹೋದರೆ ಎರಡು ಗಂಟೆ ಬೇಕು. ಬೇಗನೆ ಹೋಗು. ಗಟ್ಟಿಯಾಗಿ ಮಾತಾಡಬೇಕು ಇತ್ಯಾದಿ.

ನಾಮಪದಗಳಿಗೆ ಆಗಿ ಎಂಬ ಅವ್ಯಯವನ್ನು ಸೇರಿಸಿ ವಿಶೇಷಣ ಮಾಡಲಾಗುವುದು.

ಉದಾ:— ನರಕದಲ್ಲಿ ಸಿಂಹವಾಗಿ ಇರುವುದಕ್ಕಿಂತಲೂ ಸ್ವರ್ಗದಲ್ಲಿ ನಾಯಾಗಿ ಇರುವುದು ಲೇಸು. ಮನುಜನಾಗಿ ಹುಟ್ಟಿ ಏನು ಫಲ? ಇತ್ಯಾದಿ.

ಅಭ್ಯಾಸ

೧. ಕೆಳಗಿನ ಮಾತುಗಳಿಂದ ನಾಮವಿಶೇಷಣಗಳನ್ನು ಹೆಕ್ಕಿರಿ:—
   ಹಳೆಯ ಕಾಲ, ಬಿಳಿಯ ಬಣ್ಣ.
   'ನೆರೆಯ ಹಳ್ಳಿಯಲ್ಲಿ ಗುಮ್ಮಣಾಳ್ವನಿದ್ದ—ಹಣದ ಪೆಟ್ಟಿಗೆಯಲ್ಲಿ ತನ್ನ ಹರಣವೆಲ್ಲ ಇಟ್ಟು'.

೨. ಕೆಳಗಣ ಮಾತುಗಳಲ್ಲಿರುವ ಕ್ರಿಯಾವಿಶೇಷಣಗಳನ್ನು ಹೆಕ್ಕಿರಿ:—
   'ಹಿಂದುಳಿದರೆ, ಮುಂದೆ ನಡೆದರೆ, ಸುಮ್ಮನೆ ಬಂದರೆ, ಮಾತನಾಡಿದರೆ'
   'ಮರಿದುಂಬಿಯಾಗಿ ಮೇಣ್ ಕೋಗಿಲೆಯಾಗಿ ಪುಟ್ಟುವುದು'.
   'ಎಲ್ಲಿ ಭೂರಮೆ ದೇವಸನ್ನಿಧಿ ಬಯಸಿ ಬಿಮ್ಮನೆ ಬಂದಳೊ'.
   'ತಟ್ಟನಿನ್ನೊಂದು ಕಡೆಯಲ್ಲಿ ಜನಿಸುವೆವು?'
   'ರಾಜಂ ಜಗ್ಗನೆದ್ದು ನೋಡಿದನು'.

ಹನ್ನೆರಡನೆಯ ಅಧ್ಯಾಯ

ವಾಕ್ಯ—ವಿರಾಮ ಚಿಹ್ನೆಗಳು.

ವಾಕ್ಯವೆಂದರೆ ಸಂಪೂರ್ಣ ಅರ್ಥಕೊಡುವ ಪದಗಳ ಸಮೂಹವು. ವಾಕ್ಯದಲ್ಲಿ ಕ್ರಿಯಾಪದವೇ ಮುಖ್ಯವಾದ ಪದವು. ನಾಮಪದಗಳು ಅದಕ್ಕೆ ಕಾರಕಗಳಾಗಿ ಸೇರುವುವು. ವಿಶೇಷಣಪದಗಳು ನಾಮಪದಗಳಿಗೆ ಇಲ್ಲವೆ ಕ್ರಿಯಾಪದಗಳಿಗೆ ವಿಶೇಷಣಗಳಾಗಿ ಬರುವುವು.

ಕೆಳಗಣ ಐದು ವಾಕ್ಯಗಳನ್ನು ಪರೀಕ್ಷಿಸಿರಿ:—

೧. ದುರ್ಯೋಧನ, ಈ ಕಡೆ ನೋಡು.

೨. ಅಶ್ವತ್ಥಾಮನು ಬಂದಿದ್ದಾನೆ.

೩. ನಾವು ಮೂವರು ಪುನಃ ನಿನ್ನ ಬಳಿಯಲ್ಲಿದ್ದೇವೆ.

೪. ನೋಡು.

೫. ನೀನು ಬುದ್ಧಿವಂತನು.

ವಾಕ್ಯದೊಳಗೆ ಇಷ್ಟೇ ಪದಗಳಿರಬೇಕೆಂಬ ನಿಯಮವಿಲ್ಲ. ಅರ್ಥವು ಸಂಪೂರ್ಣವಾದರಾಯಿತು. ಅರ್ಥ ಸಂಪೂರ್ಣತೆ ಇರುವುದರಿಂದ ಇವು ಐದು ವಾಕ್ಯಗಳು.

ಕ್ರಿಯಾಪದವು ಅತ್ಯಗತ್ಯವಾದ ಪದವು. ಅದು ಇಲ್ಲದೆ ವಾಕ್ಯವಿಲ್ಲ. ಆದರೂ ೫ನೆಯ ವಾಕ್ಯದಲ್ಲಿ ಕ್ರಿಯಾಪದ ಇದ್ದಂತೆ ತೋರುವುದಿಲ್ಲ. ಇದು ಕಾಣುವುದಿಲ್ಲವಾದರೂ ಅಲ್ಲಿ **ಇರುತ್ತೀಯೆ** ಎಂಬ ಕ್ರಿಯೆಯನ್ನು ಸುಲಭವಾಗಿ ತಿಳಕೊಳ್ಳಬಹುದು. ಈ ರೀತಿ ಹೇಳದೆ ಅರ್ಥವಾಗುವಲ್ಲಿ ಅದನ್ನು ಹೇಳದೇ ಬಿಡುವುದುಂಟು. ಹೀಗೆ ಸೇರಿಸುವುದಕ್ಕೆ **ಅಧ್ಯಾಹಾರ** ಎನ್ನುತ್ತಾರೆ.

೪ನೆಯ ವಾಕ್ಯವು ಒಂದೇ ಪದದಿಂದ ಆದಂತೆ ತೋರುತ್ತದೆ. ಕ್ರಿಯೆ ಇರುವಲ್ಲಿ ಅದರ ಕರ್ತೃವು ಇದ್ದೇ ಇರಬೇಕು. ಇಲ್ಲಿ **ನೀನು** ಎಂಬ ಕರ್ತೃವನ್ನು ಸುಲಭವಾಗಿ ಗ್ರಹಿಸಬಹುದಾದುದರಿಂದ ಅದನ್ನು ಅಧ್ಯಾಹಾರ ಮಾಡಿದೆ.

ಹನುಮಂತನು ಲಂಕೆಯನ್ನು— ಎಂಬಲ್ಲಿ ಶಬ್ದಗಳಿಗೆ ಅರ್ಥವಾಗುತ್ತದೆ. ಆದರೆ ಕ್ರಿಯಾಪದ ಇಲ್ಲ, ಮಾತ್ರವಲ್ಲ ಅದನ್ನು ಗ್ರಹಿಸಿಕೊಳ್ಳುವುದಕ್ಕೂ ಅವಕಾಶವಿಲ್ಲ. ಆದುದರಿಂದ ಈ ಪದ ಸಮೂಹಕ್ಕೆ ಸಂಪೂರ್ಣ ಅರ್ಥವಾಗುವುದಿಲ್ಲ. ಆ ಕಾರಣದಿಂದ ಇದು ವಾಕ್ಯ ಆಗಲಾರದು. ಹನುಮಂತನು ಲಂಕೆಯನ್ನು

ಎಂಬುದು ಸುಟ್ಟನು ಕ್ರಿಯಾಪದ ಸೇರೋಣದರಿಂದ ಅರ್ಥ ಸಂಪೂರ್ಣವಾಗಿ ವಾಕ್ಯವಾಯಿತು.

ವಾಕ್ಯಗಳು ಕೂಡಿ ಪ್ರಬಂಧವಾಗುವುದು. ಪ್ರಬಂಧವನ್ನು ಅರ್ಥವಾಗುವಂತೆ ಓದುವಾಗ ಎಲ್ಲಿ ಉಸಿರನ್ನು ನಿಲ್ಲಿಸಬೇಕು, ಯಾವ ಭಾವದಲ್ಲಿ ಓದಬೇಕು, ಎಲ್ಲಿ ಏರುಕಂಠ ಇಳಿಕಂಠವಾಗ ಬೇಕು ಎಂಬಿತ್ಯಾದಿಗಳನ್ನು ಸೂಚನೆ ಮಾಡುವುದಕ್ಕೆ ಕೆಲವು ಚಿಹ್ನೆ ಗಳನ್ನು ಮಾಡಿರುತ್ತಾರೆ.

ಒಂದು ವಾಕ್ಯ ಪೂರ್ತಿ ಆಯಿತು ಎಂದು ಸೂಚಿಸುವು ದಕ್ಕೆ . ಚುಕ್ಕಿ ಹಾಕುವರು. ಇದಕ್ಕೆ ಪೂರ್ಣವಿರಾಮವೆಂದು ಹೆಸರು.

'ನಿನ್ನ ಕಣ್ಣುಗಳು ಪಂಜಿನಂತೆ ಉರಿಯುತ್ತವೆ. ಬಾರಯ್ಯ ಸ್ವಲ್ಪ ಆಯಾಸ ಪರಿಹರಿಸಿಕೊ.

ಒಂದು ಮಾತು ಅರ್ಧ ಮುಗಿಯುವಲ್ಲಿ ; ಒಂದು ಚುಕ್ಕಿ ಅದರ ಕೆಳಗೆ ಒಂದು ಕೊಂಬು ಹಾಕುವರು. ಇದಕ್ಕೆ ಅರ್ಧವಿರಾಮ ಎಂದು ಹೆಸರು.

'ದ್ರುಪದರಾಜನ ಮಗಳಾಗಿ ಹುಟ್ಟಿದೆ; ಪಾಂಡವರೈವರ ರಾಣಿಯಾಗಿ ಜೂಜಿನಲ್ಲಿ ಪಣವಾದೆ; ಕೃಷ್ಣನ ತಂಗಿಯೆಂದು ಕರೆದ ನಾನು ತುಂಬಿದ ಸಭೆ ಯಲ್ಲಿ ಅಪಮಾನಿತಳಾದೆ; ಗಂಡಂದಿರ ಸಹನೆಯಿಂದ ಹದಿಮೂರು ವರ್ಷ ಕಾಡು ಕಾಡು ಅಲೆದೆ; ಈಗ ತಂದೆ ಸೋದರರು ಮಕ್ಕಳನ್ನು ಕಳೆದುಕೊಂಡು ಹೀಗೆ ನಿರ್ಭಾಗ್ಯಳಾಗುತ್ತಿದ್ದೇನೆ.'

ಸ್ವಲ್ಪ ಮಾತ್ರ ಉಸಿರು ನಿಲ್ಲಿಸಬೇಕಾದಲ್ಲಿ ಒಂದು , ಕೊಂಬು ಹಾಕುವರು. ಇದಕ್ಕೆ ಅಲ್ಪವಿರಾಮ ಎಂದು ಹೆಸರು.

'ಅಶ್ವತ್ಥಾಮ ಹುಚ್ಚು ಹುಚ್ಚಾಗಿ ಗೊಣಗುತ್ತ, ಹಲ್ಲು ಕಡಿಯುತ್ತ, ನಿಟ್ಟುಸಿರು ಬಿಡುತ್ತ, ಎದ್ದೆದ್ದು ನೆಲವನ್ನು ಒದೆಯುತ್ತ ಬಿರುನುಡಿಗಳನ್ನು ನುಡಿಯು ತ್ತಿದ್ದನು.'

ಇದೊಂದು ಪ್ರಶ್ನೆಗೂಡಿದ ವಾಕ್ಯವು; ಅದನ್ನು ಏರುಕಂಠದಲ್ಲಿ ಓದಬೇಕು ಎಂದು ಸೂಚಿಸುವುದಕ್ಕೆ ? ಒಂಟಿಯಿಂದ ಕೂಡಿದ ಕಿವಿಯ ಚಿಹ್ನೆಯನ್ನು ಹಾಕುವರು. ಈ ಚಿಹ್ನೆಯನ್ನು ಪ್ರಶ್ನಾರ್ಥಕ ಚಿಹ್ನೆಯೆಂದು ಕರೆಯುವರು.

'ಇದಾವುದು ನಿನ್ನ ಕೈಯೊಳಗಿದ್ದ ಖಡ್ಗ? ಎಷ್ಟು ಹೊತ್ತು ಏನು ಮಾಡುತ್ತಿದ್ದೆ? ಕಂಬವನ್ನು ಕಿತ್ತು ವಾಳಿಗೆಯನ್ನು ಮೇಲೆ ಕೆಡವಿಕೊಳ್ಳುವರೇನೊ?'

ದುಃಖ ಆಶ್ಚರ್ಯಾದಿ ಭಾವಗಳನ್ನು ಆಯಾ ಕಂಠದಿಂದ ಓದುವ ಬಗ್ಗೆ ! ಒಂದು ಕಂಬ ಹಾಕಿ ಅದರಡಿಗೆ ಚುಕ್ಕಿ ಹಾಕುತ್ತಾರೆ. ಇದನ್ನು ಉದ್ಗಾರಚಿಹ್ನೆಯೆನ್ನುವರು.

'ರಾಜಾಧಿರಾಜನಾದ ನಿನಗೆ ಏನು ಗತಿ ಬಂದಿತು ಮಿತ್ರ! ಒಂದು ನಾಯಿ, ಒಂದು ಮೊಲ, ಒಂದು ಇಲಿ ಜೀವಿಸಿರಬಹುದಂತೆ! ನೀನು ಇಲ್ಲವಾಗಬಹುದೆ! ಎಷ್ಟು ಜನ ಪರಿವಾರದವರಿರುತ್ತಿದ್ದರು! ಈಗ ಎಲ್ಲವೂ ನಾಶವಾಗಿ ಬಳಿಯಲ್ಲಿ ಒಬ್ಬ ಪರಿಚಾರಕನು ಕೂಡ ಇಲ್ಲದಂತಾಯಿತು.'

ಬರೆಯುವವನ ಮಾತಲ್ಲ ಮತ್ತೊಬ್ಬನು ಆಡಿದ ಮಾತು ಎಂದು ಸೂಚಿಸುವುದಕ್ಕೆ ಆ ಮಾತಿನ ಮೊದಲಲ್ಲಿ ಮತ್ತು ಕೊನೆಯಲ್ಲಿ " " ' ' ಎರಡೆರಡು ಇಲ್ಲವೆ ಒಂದೊಂದು ಕೊಂಬನ್ನು ಮೇಲ್ಮೊಗ ಇಳಿಮೊಗವಾಗಿ ಹಾಕುವರು. ಈ ಚಿಹ್ನೆಯನ್ನು ವಾಕ್ಯವೇಷ್ಟನ ಚಿಹ್ನೆ ಎನ್ನುವರು.

ಮಂತ್ರವಾದಿಯು, "ಇನ್ನು ರಾಹುಕಾಲ ದಾಟುವ ತನಕ ನನ್ನಿಂದೇನೂ ಆಗದು" ಎಂದು ದೂರವಾದನು.

ಅಭ್ಯಾಸ

ಕೆಳಗಣ ಮಾತುಗಳಲ್ಲಿ ಅಗತ್ಯವಾದ ವಿರಾಮ ಚಿಹ್ನೆಗಳನ್ನು ಹಾಕಿರಿ:

ಕೊಡಗೂಸಿಗೆ ಆದ ಆನಂದವನ್ನು ಹೇಳಿತೀರದು ಅವಳು ಎಲೆ ದೇವ ನಾನು ತಿಳಿಯದ ಹುಡುಗಿಯೆಂದು ಇಷ್ಟು ಹೊತ್ತು ಕಾಡಿದೆಯಲ್ಲವೆ ನಿಲ್ಲು ನನ್ನ ಅಪ್ಪನು ಬಂದ ಮೇಲೆ ಹೇಳುತ್ತೇನೆ ಆಗ ನನಗೂ ನಿನಗೂ ಮಾತಾಗಲಿಕ್ಕುಂಟು ನೋಡಿಕೊ ಎಂದು ನಗು ನಗುತ್ತ ಹೇಳಿದಳು ಶಿವನೂ ಆಕೆಯ ಮಾತಿಗೆ ನಕ್ಕನು

ಹದಿಮೂರನೆಯ ಅಧ್ಯಾಯ

ಛಂದಸ್ಸು

ಪದ್ಯಬಂಧದ ಕ್ರಮವನ್ನು ಕಲಿಸುವ ಶಾಸ್ತ್ರಕ್ಕೆ ಛಂದಸ್ಸು ಎಂದು ಹೆಸರು. ಪದ್ಯವೆಂದರೆ ಒಂದು ಗತ್ತಿನಲ್ಲಿ ಅಥವಾ ನಿಯತ ವಾದ ಗತಿಯಿಂದ ಹರಿಯುವ ಪದಸಮೂಹವು. ಆ ಗತಿಯ ಹಜ್ಜೆ ಯನ್ನು ಗೊತ್ತುಮಾಡಿ ಅದರ ಕ್ರಮವನ್ನು ನಿಶ್ಚಯಿಸಿ ಹೇಳುವುದು ಛಂದಸ್ಸು.

ಪದ್ಯಕ್ಕೆ ಕ್ರಮಬದ್ಧವಾದ ಪಾದಗಳಿರುತ್ತವೆ. ಪಾದಗಳಿಗೆ ಚರಣಗಳೆಂಬ ಹೆಸರೂ ಉಂಟು. ವಿಷಯಕ್ಕೆ ತಕ್ಕಂತೆ, ಭಾವಕ್ಕೆ ತಕ್ಕಂತೆ, ಕವಿಯ ಇಷ್ಟಕ್ಕೆ ತಕ್ಕಂತೆ ಎರಡು ಚರಣಗಳ ಪದ್ಯಗಳು, ಮೂರು ಚರಣಗಳ ಪದ್ಯಗಳು, ನಾಲ್ಕು ಚರಣಗಳ ಪದ್ಯಗಳು, ಆರು ಚರಣಗಳ ಪದ್ಯಗಳು ಎಂಬ ಕ್ರಮಗಳು ಆದುವು.

ಎರಡು ಚರಣಗಳ ಪದ್ಯಗಳನ್ನು ದ್ವಿಪದಿ ಎನ್ನುವರು. ಮೂರು ಚರಣಗಳ ಪದ್ಯಕ್ಕೆ **ತ್ರಿಪದಿ** ಎಂದು ಹೆಸರು. ನಾಲ್ಕು ಚರಣಗಳ ಪದ್ಯವನ್ನು **ಚೌಪದಿ** ಎಂದು ಕರೆಯುತ್ತಾರೆ. ಆರು ಚರಣಗಳ ಪದ್ಯವನ್ನು ಷಟ್ಪದಿಯೆಂದು ಹೇಳುವರು.

ಒಂದೊಂದು ಪಾದಕ್ಕೆ ಇಂತಿಷ್ಟು ಗಣಗಳು ಇಡುವುದೆಂದು ಬರೆಯುವವರು ಮೊದಲೆ ನಿಶ್ಚಯಿಸುತ್ತಾರೆ. ಕನ್ನಡ ಪದ್ಯಕ್ರಮ ದಲ್ಲಿ ಮಾತ್ರಾಗಣಗಳೇ ಹೆಚ್ಚಾಗಿ ಬರುವುವು. ಮಾತ್ರಾಗಣವೆಂದರೆ ಗಣಕ್ಕೆ ಇಂತಿಷ್ಟೆ ಮಾತ್ರೆಗಳು ಎಂದು ಏರ್ಪಡಿಸಿದ ಒಂದು ಕ್ರಮ.

ಒಂದು ಮಾತ್ರೆಯೆಂದರೆ ಒಂದು ಹ್ರಸ್ವವನ್ನು ಉಚ್ಚರಿಸು ವುದಕ್ಕೆ ಬೇಕಾಗುವ ಸಮಯ. ದೀರ್ಘವನ್ನು ಉಚ್ಚರಿಸಲಿಕೆ ಸಹಜವಾಗಿ ಎರಡು ಮಾತ್ರೆಗಳಷ್ಟು ಸಮಯ ಬೇಕು. ಇದರಂತೆ

ಬಿಂದು ಕೂಡಿದ ಅಕ್ಷರ, ವಿಸರ್ಗದಿಂದ ಕೂಡಿದ ಅಕ್ಷರ ಒತ್ತಕ್ಷರದ ಹಿಂದಣ ಅಕ್ಷರವೂ ಪದಾಂತದಲ್ಲಿರುವ ಅಕ್ಷರವೂ ಎರಡು ಮಾತ್ರೆಗಳ ಅಕ್ಷರಗಳೆಂದು ತಿಳಿಯಬೇಕು.

ಒಂದು ಮಾತ್ರೆಯ ಅಕ್ಷರವನ್ನು ಲಘುವೆನ್ನುವರು. ಲಘು ವೆಂದರೆ ಸಣ್ಣದು ಎಂದು ಅರ್ಥವಾಗುವುದು. ಎರಡು ಮಾತ್ರೆಗಳ ಅಕ್ಷರವನ್ನು ಗುರು ಎನ್ನುವರು. ಗುರು ಎಂದರೆ ದೊಡ್ಡದು ಎಂದು ಅರ್ಥವು.

ಲಘುವಿಗೆ ◡ ಚಿಹ್ನೆಯನ್ನು ಗುರುವಿಗೆ — ಚಿಹ್ನೆಯನ್ನು ಹಾಕುತ್ತಾರೆ.

ಕನ್ನಡದಲ್ಲಿ ಮಾತ್ರಾಗಣಗಳನ್ನು ಏರ್ಪಡಿಸುವಾಗ ಮೂರು ಮಾತ್ರೆಯ ಗಣಗಳು, ನಾಲ್ಕು ಮಾತ್ರೆಯ ಗಣಗಳು, ಐದು ಮಾತ್ರೆಯ ಗಣಗಳೆಂದು ಮೂರು ವಿಧದ ಗಣಗಳನ್ನು ಮಾಡು ವರು.

ದ್ವಿಪದಿಗೆ ಮೊದಲನೆಯ ಚರಣಕ್ಕೆ ಇಟ್ಟ ಅಳತೆಯನ್ನೆ ಎರಡ ನೆಯ ಚರಣಕ್ಕೂ ಇಡುವರು.

ಕನ್ನಡದಲ್ಲಿ ಪ್ರಸಿದ್ಧವಾದ ದ್ವಿಪದಿಗೆ ಪ್ರತಿ ಚರಣಕ್ಕೆ ಐದು ಮಾತ್ರೆಯ ಮೂರು ಗಣಗಳೂ ನಾಲ್ಕು ಮಾತ್ರೆಯ ಒಂದು ಗಣವೂ ಇರುತ್ತವೆ.

◡ ◡ ◡ — | ◡ ◡ ◡ ◡ ◡ | ◡ ◡ ◡ — | ◡ ◡ —
ಶ್ರುತಿಯು ಕೇ | ಳಿಸಲಖಿಲ | ಜನರು ಕೂ | ಡಿದರು

◡ ◡ ◡ — | ◡ ◡ — ◡ | — ◡ — | ◡ ◡ —
ಅತಿವಿಚಿ | ತ್ರದಿ ಡೊಂಬ | ರಾಟವಾ | ಡಿದರು. ॥ ೧ ॥

ಹಿರಿಯ ಡೊಂಬಸು ಬಹಳ ಜಾಣಸವರೊಳಗೆ .
ಬೆರಗು ಮಾಡಿದನೆಮ್ಮಸರೆಗಳಿಗೆಯೊಳಗೆ ॥ ೨ ॥

ಪಾದಗಳನ್ನು ಒಂದರ ಕೆಳಗೊಂದನ್ನು ಬರೆಯುವುದು ವಾಡಿಕೆ. ಪ್ರತಿಚರಣದ ಎರಡನೆಯ ಅಕ್ಷರವು ಎರಡು ಪಾದಗಳಲ್ಲಿಯೂ ಒಂದೇ ಆಗಿದೆ. ಹೀಗಿರುವುದಕ್ಕೆ ಪ್ರಾಸವೆನ್ನುತ್ತಾರೆ. ಮೊದಲನೆಯ ಪದ್ಯದಲ್ಲಿ ತ ಪ್ರಾಸವಿದೆ. ಇದು ಪಾದದ ದ್ವಿತೀಯಾಕ್ಷರವು. ಆದುದರಿಂದ ಇದಕ್ಕೆ ದ್ವಿತೀಯಾಕ್ಷರ ಪ್ರಾಸ ಎಂದು ಹೆಸರು. ಚರಣದ ಅಂತ್ಯದಲ್ಲಿ **ಕೂಡಿದರು ಆಡಿದರು** ಎಂಬ ಪದಗಳಲ್ಲಿಯೂ ಪ್ರಾಸವಿದೆ. ಇದು ಅಂತ್ಯದಲ್ಲಿರುವುದರಿಂದ ಅಂತ್ಯಪ್ರಾಸವೆನ್ನುವರು. ದ್ವಿಪದಿಯಲ್ಲಿ ಹೆಚ್ಚಾಗಿ ದ್ವಿತೀಯಾಕ್ಷರ ಅಂತ್ಯಪ್ರಾಸಗಳನ್ನು ಇಡುವರು. ಪ್ರಾಸವು ಒಂದು ಶಬ್ದಾಲಂಕಾರವು. ಅದು ಹಾಡಿನ ಇಂಪಿಗೆ ಹೊರತು ಅರ್ಥಕ್ಕೆ ಅಗತ್ಯವಿಲ್ಲ.

ರಾಜಶೇಖರ ವಿಲಾಸವೆಂಬ ಪ್ರಸಿದ್ಧವಾದ ಕನ್ನಡ ಕಾವ್ಯದಲ್ಲಿ ಬೇರೊಂದು ಕ್ರಮದ ದ್ವಿಪದಿ ಇದೆ. ಕವಿ ಪ್ರತಿ ಚರಣಕ್ಕೂ ಮೂರುನಾಲ್ಕು ಮೂರುನಾಲ್ಕು ಮಾತ್ರೆಗಳ ಕ್ರಮದಲ್ಲಿ ಏಳು ಗಣಗಳನ್ನಿಟ್ಟು ಕೊನೆಗೆ ಒಂದು ಹೆಚ್ಚು ಗುರು ಇಟ್ಟಿದ್ದಾನೆ.

ಮಂಗನೆ | ನೀನಿಂ | ತಳಿಯೆ | ಸ್ಫುರಿಪೆ | ನೆಂತೊ | ಪೇಳ್ವೈ | ಶಂಕ | ರಾ
ಸುಗುಣ | ನಿಧಿನೀ | ನೆನ್ನ | ಮೊರೆಗಳ | ನೊರ್ವೆ | ಕೇಳ್ವೈ | ಶಂಕ | ರಾ ॥ ೧ ॥

ಪರಸಿ | ಪಾಡಿ ಮ | ಹೇಶ | ನಿಂದಮೆ | ಬೇಡಿ | ಮುನ್ನಂ | ಶಂಕ | ರಾ
ತುರಗ | ಖುರಕೆಂ | ದಕಟ | ಪೆತ್ತೆನೆ | ಕುವರ | ನಿನ್ನಂ | ಶಂಕ | ರಾ ॥ ೨ ॥

ಇದರಂತೆ ಕವಿಯ ಇಷ್ಟ ಪ್ರಕಾರ ಬೇರೆ ಉಳತೆಯ ದ್ವಿಪದಿಗಳನ್ನು ಕಟ್ಟಬಹುದು.

ತ್ರಿಪದಿಗೆ ಮೂರು ಪಾದಗಳು. ಇದೊಂದು ಹಳೆಯ ಪದ್ಯಬಂಧವು. ಹಳೆಯ ಮಹಾಕಾವ್ಯಗಳಲ್ಲಿಯೂ ಅಲ್ಲಲ್ಲಿ ತ್ರಿಪದಿಗಳು

ದೊರೆಯುವುವು. ಅನೇಕ ದಾಸರು ಈ ಧಾಟಿಯಲ್ಲಿ ಹಾಡಿ ತ್ರಿಪದಿ ಗಳನ್ನು ಬರೆದಿದ್ದಾರೆ. ಕನ್ನಡದಲ್ಲಿ ಸರ್ವಜ್ಞನ ತ್ರಿಪದಿಗಳು ಬಹು ಪ್ರಸಿದ್ಧವಾದುವು. ತ್ರಿಪದಿಗೆ ಬೇರೆ ಕನ್ನಡ ಪದ್ಯಗಳಿರುವಂತೆ ಮೂರು ನಾಲ್ಕು ಐದರ ಮಾತ್ರಾಗಣ ನಿಯಮವಿರುವುದಿಲ್ಲ. ಇದು ಮುಖ್ಯವಾಗಿ ಹಾಡುವ ಮಟ್ಟಾದುದರಿಂದ ಮಾತ್ರೆಗಳು ಕಡಿಮೆ ಯಾದರೆ ಎಳೆದು ಸರಿಮಾಡಿ ತಾಳಕ್ಕೆ ತಕ್ಕಂತೆ ಹಾಡುತ್ತಾರೆ. ಸರ್ವ ಜ್ಞನ ತ್ರಿಪದಿಗಳಲ್ಲಿ ಎರಡನ್ನು ಗಣ ವಿಂಗಡಿಸಿ ಕೆಳಗೆ ಬರೆದಿದೆ.

ಆನೆ ನೀ । ರಾಟದಲಿ । ಮಿಾನ ಕಂ । ಡಂಜುವುದೆ ।
ಹೀನಮನ । ದವರ । ಬಿರುನುಡಿಗೆ । ತತ್ವದಾ
ಜ್ಞಾನಿಯಂ । ಜುವನೆ । ಸರ್ವಜ್ಞ.
ಚಿತ್ರವನು । ನವಿಲೊಳು ವಿ । ಚಿತ್ರವನು । ಗಗನದೊಳು
ಪತ್ರ ಪು । ಷ್ಪಗಳ । ವಿವಿಧ ವ । ರ್ಣಗಳಿಂದ
ಚಿತ್ರಿಸಿದ । ರಾರು । ಸರ್ವಜ್ಞ.

ಇದನ್ನು ಹಾಡುವಾಗ ಹೆಚ್ಚಾಗಿ ಎರಡನೆಯ ಚರಣದ ಮೂರು ಗಣಗಳ ವರೆಗೆ ಹೇಳಿ ಮತ್ತೆ ಆ ಎರಡನೆಯ ಚರಣವನ್ನು ಮೊದ ಲಿಂದ ಹೇಳುವ ವಾಡಿಕೆ ಇರುವುದು.

ಚೌಪದಿಯಲ್ಲಿ ಹಲವು ಪ್ರಭೇದಗಳಿವೆ. ಅವುಗಳಲ್ಲಿ ಪ್ರಸಿದ್ಧ ವಾದುವು ಎರಡು.

ಒಂದು ವಿಧವು ದ್ವಿಪದಿಯ ಮಾತ್ರಾಕ್ರಮವನ್ನು ಅನುಸರಿಸು ವುದು. ನಾಲ್ಕು ಚರಣಗಳಿಗೆ ಪ್ರಾಸಾಕ್ಷರ ಒಂದೇ ಇಟ್ಟು ಬರೆಯು ವುದರಿಂದ ಇದನ್ನು ದ್ವಿಪದಿಯಿಂದ ಸುಲಭವಾಗಿ ಬೇರ್ಪಡಿಸ ಬಹುದು.

ಅಳಿಯನುಡು | ಗೊರೆಯಲ್ಲ | ಮುನಿದು ಕೇ | ಳುವರೆ ।
ಒಳಿಯು ಸಂಬಳವಲ್ಲ ನಿಂತು ಕೇಳುವರೆ ।
ಹಳೆ ಸಾಲವಲ್ಲ ಹಗಲಿರುಳು ಕಾಡುವರೆ ।
ಅಳಿಮನವ ಮಾಡದಿರಿ ಕೀರ್ತಿಗಳಿಸುವರೆ ।

ಮಿಕ್ಕ ಕ್ರಮಗಳು ಚರಣಗಳಲ್ಲಿ ಒಂದು ಯಾ ಎರಡು ಮಾತ್ರೆಗಳನ್ನು ಹೆಚ್ಚಿಸಿ ಇಲ್ಲವೆ ಕುಂದಿಸಿ ಮಾಡಿದವುಗಳು. ಇವುಗಳಲ್ಲಿ ಒಂದನೆಯ ಮೂರನೆಯ ಚರಣಕ್ಕೆ ಒಂದು ಅಳತೆಯೂ ಎರಡನೆಯ ನಾಲ್ಕನೆಯ ಚರಣಕ್ಕೆ ಒಂದು ಅಳತೆಯೂ ಆಗಿ ಗಾತ್ರದಲ್ಲಿ ವ್ಯತ್ಯಾಸವಿರುತ್ತದೆ. ಎರಡನೆಯ ನಾಲ್ಕನೆಯ ಪಾದಗಳು ಸ್ವಲ್ಪ ಚಿಕ್ಕವು.

ಬಾರೆನ್ನ | ಮನೆ ಬೆಳಗೆ | ಸಾರು ಬೇ | ಗನೆ ಬಳಿಗೆ ।
ತೋರು ನಿ | ನ್ನಯ ಮೊಗವ | ಜೀರೆಸಗೆ | ಸೊಗವ ।
ಮೀರಿಹುದು ಸುಖವಿಂದು—ಯಾರೆ ಬೇಗನೆ ಬಂದು ।
ನೀರ ಬಿಂದಿಗೆ ಎಳಕೊ ಹೋ ಕವಚಿದಳಕೊ ।

ಮೊದಲನೆಯ ಮೂರನೆಯ ಚರಣಗಳ ಕೊನೆಯ ಗಣಕ್ಕೆ ಒಂದು ಮಾತ್ರೆ ಹೆಚ್ಚಿಸಿದುದೇ ಇದರ ವಿಶಿಷ್ಟತೆ. ಬೇರೆ ಎಲ್ಲಾ ಮಟ್ಟಿಗೂ ಮೊದಲನೆಯ ಕ್ರಮದ ಚೌಪದಿಯಂತೆ ಇರುವುದು. ಉದಾಹರಿಸಿದ ಪದ್ಯದಲ್ಲಿ ಆದಿ ಅಂತ್ಯ ಪ್ರಾಸಗಳಲ್ಲದೆ ಮಧ್ಯ ಪ್ರಾಸವೂ ಇದೆಯೆಂಬುದನ್ನು ಗಮನಿಸಿರಿ. ಅದು ಬರೇ ಅಂದಕ್ಕೆ ಅಲ್ಲದೆ, ಅದರ ಲಕ್ಷಣವಾಗಿ ಸೇರಿದುದಲ್ಲ.

ಕನ್ನಡದಲ್ಲಿ ಷಟ್ಪದಿ ಕಾವ್ಯಗಳು ತುಂಬ ಇವೆ. ಒಂದು ಕಾಲದಲ್ಲಿ ಇವು ಬಹಳ ಬಳಕೆಯಲ್ಲಿದ್ದುವು.

ಷಟ್ಪದಿಗಳಲ್ಲಿ ಆರು ವಿಧಗಳಿವೆ. ಅವು—ಶರ ಕುಸುಮ ಭೋಗ ಭಾಮಿನಿ ಪರಿವರ್ಧಿನಿ ವಾರ್ಧಕಗಳು. ಇವುಗಳಲ್ಲಿ ಭಾಮಿನೀ ವಾರ್ಧಕ ಷಟ್ಪದಿಗಳೇ ಬಹು ಕವಿಪ್ರಿಯವಾಗಿದ್ದಂತೆ ಕಾಣುತ್ತದೆ; ಏಕೆಂದರೆ ಈ ಎರಡು ಷಟ್ಪದಿ ಕಾವ್ಯಗಳು ಕನ್ನಡದಲ್ಲಿ ಹೇರಳವಿವೆ.

ಷಟ್ಪದಿಬಂಧದಲ್ಲಿ ಮೊದಲನೆಯ ಮೂರು ಚರಣಗಳನ್ನು ಪೂರ್ವಾರ್ಧವೆಂದೂ ಮತ್ತಿನ ಮೂರು ಚರಣಗಳನ್ನು ಉತ್ತರಾರ್ಧವೆಂದೂ ಕರೆಯಬಹುದು. ಪೂರ್ವಾರ್ಧಕ್ಕೆ ಇಟ್ಟ ಕ್ರಮವೇ ಉತ್ತರಾರ್ಧಕ್ಕೂ ಇಡುತ್ತದೆ.

ಪೂರ್ವಾರ್ಧದ ಮೊದಲನೆಯ ಎರಡನೆಯ ಚರಣಗಳಿಗೆ ಒಂದೇ ಅಳತೆ. ಮೂರನೆಯ ಚರಣವು ಸ್ವಲ್ಪ ದೊಡ್ಡದು; ಮೊದಲನೆಯ ಚರಣದ ಒಂದುವರೆಯಷ್ಟು ಇರುವುದಲ್ಲದೆ ಒಂದು ಗುರು ಹೆಚ್ಚಿರುವುದು. ಉತ್ತರಾರ್ಧದಲ್ಲಿ ಇದೇ ಕ್ರಮ. ಇದು ಷಟ್ಪದಿಗಳ ಸಾಮಾನ್ಯ ಲಕ್ಷಣ.

ಶರಷಟ್ಪದಿ

— ˘ ˘ | ˘ ˘ ˘ ˘
ಈಶನ | ಕರುಣೆಯ

— ˘ ˘ | ˘ ˘ ˘ ˘
ನಾಶಿಸು | ವಿನಯದಿ ।

— ˘ ˘ | — ˘ ˘ | — ˘ ˘ ˘ | —
ದಾಸನ | ಹಾಗೆಯೆ | ನೀಮನ | ವೆ. ॥

ಕ್ಲೇಶದ ವಿಧವಿಧ ।
ಪಾಶವ ಹರಿದುವಿ ।
ಲಾಸದಿ ಸತ್ಯವ ತಿಳಿ ಮನವೆ ॥

ಮೊದಲನೆಯ ಎರಡನೆಯ ಚರಣಗಳಲ್ಲಿ ೪ ಮಾತ್ರೆಯ ಎರಡೆರಡು ಗಣಗಳು ಇವೆ. ಮೂರನೆಯ ಚರಣವು ಅದರ ಒಂದುವರೆಯಾಗಿ ಒಂದು ಗುರುವನ್ನು ಕೂಡಿದೆ. ಮೊದಲನೆಯ ಎರಡನೆಯ ಚರಣಗಳಲ್ಲಿ ಮಾತ್ರೆಗಳು ೮. ಮೂರನೆಯದರಲ್ಲಿ ೮+೪+೨=೧೪ ಮಾತ್ರೆಗಳು.

ಕುಸುಮಷಟ್ಪದಿ

ಕದ್ದ ವರ | ದಾರೆನ್ನ |
ಮುದ್ದು ಗೋ | ಸಿನ ಕಣ್ಣ |
ನಿದ್ದೆಯನ | ಮಲಗಿಸುತ | ಲಾಸು ಪೋ | ಗೆ.
ಎದ್ದು ಕಾಲ್ಗೆಜ್ಜೆಯಿಂ
ಸದ್ದು ಮಾಡದೆ ಬಂದು
ಮೆದ್ದು ನವನೀತಮಂ ನಗುವನಲ್ತೆ

ಮೊದಲನೆಯ ಎರಡನೆಯ ಚರಣಗಳಿಗೆ ೫ ಮಾತ್ರೆಯ ಎರಡೆರಡು ಗಣಗಳು; ಮೂರನೆಯ ಚರಣವು — ಮೊದಲನೆಯ ಚರಣದ ಒಂದುವರೆ ಮತ್ತು ಒಂದು ಗುರುವಷ್ಟು ಉದ್ದವು.

ಭೋಗ ಷಟ್ಪದಿ.

ತಿರುಕ | ನೊರ್ವ | ನೂರ | ಮುಂದೆ
ಮುರುಕ | ಧರ್ಮ | ಶಾಲೆ | ಯಲ್ಲಿ
ಯೊರಗಿ | ರುತ್ತ | ಲೊಂದ | ಕನಸ | ಕಂಡ | ನೆಂತೆ | ನೆ
ಪುರದ | ರಾಜ | ಸತ್ತ | ನವಗೆ |
ವರಕು | ಮಾರ | ರಿಲ್ಲ | ದಿರಲು
ಕರಿಯ | ಕೈಗೆ | ಕುಸುಮ | ಮಾಲೆ | ಯಿತ್ತು | ಪುರದೊ | ಳು

ಮೊದಲನೆಯ ಎರಡನೆಯ ಚರಣಗಳಲ್ಲಿ ೩ ಮಾತ್ರೆಯ ನಾಲ್ಕು ನಾಲ್ಕು ಗಣಗಳು ಇವೆ. ಮೂರನೆಯ ಚರಣವು ಹಿಂದೆ ಹೇಳಿದಂತೆ, ಮೊದಲನೆಯ ಚರಣದ ಒಂದುವರೆಯ ಮೇಲೆ ಒಂದು ಗುರು ಕೂಡಿಕೊಂಡಿದೆ.

ಭಾಮಿನೀ ಷಟ್ಪದಿ

ಈ ಪದ್ಯಬಂಧದಲ್ಲಿ ೩ ಮಾತ್ರೆಯ ೪ ಮಾತ್ರೆಯ ಗಣಗಳು ಕ್ರಮವಾಗಿ ಇಡಲ್ಪಡುವುವು. ಮೊದಲನೆಯ ಎರಡನೆಯ ಚರಣಗಳಿಗೆ ನಾಲ್ಕು ಗಣಗಳು. ಮೂರನೆಯ ಚರಣಕ್ಕೆ ಆರು ಗಣಗಳು ಮತ್ತು ಒಂದು ಗುರು.

ಕೆಳೆಕೆ | ಗೆಳು ಕೊಸ | ರಾಗ | ಕೊಸೆಯೊಡೆ
ದೆಲೆಗ | ಳೊಂದೆರ | ಡಾಗಿ | ರಾಗಿಸಿ
ತಳಿತು | ಸೆಳೆಗೊಂ | ಬಾಗಿ | ಸನೆ ನೊಸ | ದೋರಿ | ಮುಗುಳಾ | ಗಿ
ಅಲರು | ಮಾಮಿಡಿ | ಬಲ್ಮಿ | ಡಿಯಲು |
ಗ್ಗಲಿಸಿ | ಕಾಯ್ಗಳ | ದೋರೆ | ಗಳ ಪ
ಗ್ಗಳ ಸೊ | ಬಗಿನಿ | ವ್ಮಾವು | ಮೆರೆದುದು | ಜರಿದು | ಸುರಕುಜ | ವಾ.

ಪರಿವರ್ಧಿನೀ ಷಟ್ಪದಿ

ಇದರ ಹೆಸರಿನಂತೆ ಇದು ಶರಷಟ್ಪದಿಯ ಪರಿವರ್ಧಿತ ರೂಪವು. ಶರಷಟ್ಪದಿಯ ಎರಡು ಚರಣಗಳಷ್ಟು ಇದರ ಒಂದು ಚರಣ. ಇದರ ಉದ್ದ ಚರಣವು ಕ್ರಮದಂತೆ ಮೊದಲನೆಯ ಚರಣದ ಒಂದುವರೆಯಷ್ಟು ಆಗಿ ಆ ಮೇಲೆ ಒಂದು ಗುರುವನ್ನು ತಾಳುವುದು.

ಪರಸಿದ | ಯತಿ ಕುಲ | ತಿಲಕಗೆ | ಕೈಮುಗಿ
ದರೆ ಮಗ | ನಿಂತೆಂ | ದಂ ಜತಿ | ರಾಯಾ |
ಧರೆಯೊಳ್ | ಧರ್ಮದೊ | ಳುತ್ತಮ | ಧರ್ಮಮ | ದಾವುದು | ನಿರವಿಸೆ | ನೆ.
ಒರೆದಂ ಹಿಂಸಾಸ್ಮೃತವಂಚನ ಪರ
ತರುಣೀರತ ಬಹು ಕಾಂಕ್ಷೆಗಳಂ ನೆರೆ
ಪರಿಹರಿಸುವುದುತ್ತಮಮೆನುತವರ ತೆರಸನಿರದಿಂತೆಂದು ||

ವಾರ್ಧಕ ಷಟ್ಪದಿ

ವಾರ್ಧಕ ಷಟ್ಪದಿಯಲ್ಲಿ ಕುಸುಮ ಷಟ್ಪದಿಯ ಕ್ರಮವು ವೃದ್ಧಿಯಾಗಿದೆ; ಆದುದರಿಂದಲೇ ವಾರ್ಧಕ ಎಂಬ ಹೆಸರಾಯಿತು. ಕುಸುಮ ಷಟ್ಪದಿಯ ಮೊದಲನೆಯ ಎರಡು ಚರಣಗಳಷ್ಟು ಇಲ್ಲಿಯ ಒಂದು ಚರಣವಿದೆ. ದೀರ್ಘಚರಣವು ಕ್ರಮದಂತೆ ಮೊದಲನೆಯ ಚರಣದ ಒಂದುವರೆಯಷ್ಟು ಅಲ್ಲದೆ ಒಂದು ಗುರು ಕೂಡಿಕೊಂಡಿದೆ.

ಸಾಮವೇ | ವೇದಂಗ | ಳೊಳಗಧಿಕ | ವಾದಂತೆ
ಸಾಮವೇ | ಮಿಗಿಲಾಯ್ತು | ಪಾಯಂಗ | ಳಲ್ಲಿ ತ
ತ್ಸಾಮವೇ | ಭೂಭುಜರ | ಬಾಳ್ಕಿಗಸು | ಸಾರಿ ಮಿಕ್ಕಿನ ಮೂರು | ಪಾಯಂಗ | ಳು

ಸಾಮಾನ್ಯಮದರೊಳಗೆ ದಂಡವೆಂದೆಂಬುದದು
ಸಾಮಾನ್ಯದೋಳಗೆ ಸಾಮಾನ್ಯಮಿದನರಿಯದರು
ಸಾಮಾನ್ಯರೆನಿಪರವನೀಪತಿಗಳೊಳು ನೃಪಲಲಾಮ ನೀ ಕೇಳೆಂದನು ||

ಸಾಂಗತ್ಯ

ಸಾಂಗತ್ಯ ಅಲ್ಲವೆ ಸಂಗತಿ ತ್ರಿಪದಿಯಂತೆ ಒಂದು ಹಾಡುವ ಮಟ್ಟು. ಜನಪದ ಸಾಹಿತ್ಯದಲ್ಲಿ ಹೆಂಗುಸರ ಬಾಯಲ್ಲಿ ಹಾಡಾಗಿ ನಲಿಯುತ್ತಿದ್ದ ಈ ಮಟ್ಟು ಸಾಹಿತ್ಯಕ್ಷೇತ್ರಕ್ಕೆ ಕಾಲಿಟ್ಟು ಸಾಧಾರಣ ಐನೂರು ವರ್ಷಗಳಾಗಬಹುದು. ಸಾಹಿತ್ಯದೃಷ್ಟಿಯಿಂದ ಇದು ತ್ರಿಪದಿಯಷ್ಟು ಹಳೆಯದಲ್ಲ. ಆದುದರಿಂದ ಛಂದೋಂಬುಧಿಯಲ್ಲಿ ಇದಕ್ಕೆ ಲಕ್ಷಣ ಹೇಳಲಿಲ್ಲ.

ಸಾಂಗತ್ಯಕ್ಕೆ ತಾಳವೇ ಮುಖ್ಯ; ಮಾತ್ರಾಗಣನೆ ಅದಕ್ಕೆ ಸರಿ ಹೋಗುವುದಿಲ್ಲ. ಹಾಡುವ ರೀತಿಯಲ್ಲಿ ಗಣವಿಭಾಗ ಮಾಡಿ, ಸಾಂಗತ್ಯದಲ್ಲಿ ಬಹು ಪ್ರಸಿದ್ಧವಾದ ಭರತೇಶ ವೈಭವದ ಮೂರು ಪದ್ಯಗಳನ್ನು ಇಲ್ಲಿ ಕೊಟ್ಟಿರುತ್ತದೆ. ಮಾತ್ರೆಗಳ ಲೆಕ್ಕದಿಂದ

ಒಂದೊಂದು ಗಣ ಚಿಕ್ಕದು ಅಥವಾ ದೊಡ್ಡದು ಎಂದು ಕಂಡರೆ ಹಾಡುವಾಗ ಸ್ವರವನ್ನು ಎಳೆದು ಇಲ್ಲವೆ ಕುಗ್ಗಿಸಿ ರಾಗಕ್ಕೆ ಅಳವಡಿಸಿ ಕೊಳ್ಳಬೇಕು.

ನಿಂದಲ್ಲಿ । ನಡೆದಲ್ಲಿ । ಕುಳಿತಲ್ಲಿ । ಸರ್ವತ್ರ ।
ಕುಂದದೆ । ಕುಶಲ ಲೀ । ಲೆಯನು ।
ಸಂದಿಸು । ವ ಭವ ನ । ನ್ನೆದೆಯೊಳ । ಗಿರು ಚಿದಾ ।
ನಂದ ಚಿ । ದಂಬರ । ಪುರುಷಾ ॥

ತೆರೆಯ ಮೇ । ಲ್ತೆರೆಗಳ । ತೋರುವಂ । ಗಡಲಂತೆ
ಸಿರಿಯು ಮೇ । ಲ್ಸಿರಿಯ ಸೂ । ಚಿಸುವ
ಚರಿತಾರ್ಥ । ನನ್ನಂತ । ರಂಗದೊ । ಳಿರು ಮನೋ ।
ಹರನೆ ಚಿ । ದಂಬರ । ಪುರುಷಾ ॥

ಕಾಣದ । ರ್ಥವ ಕಾಣಿ । ಸುವ ಪರಂ । ಜ್ಯೋತಿ ನೀ
ಮಾಣದೆ । ನನ್ನೆದೆ । ಯೆಂಬ
ಕೋಣೆಯೊ । ಳಿರು ಜೋದೆ । ಯಾದರೆ । ನಿನಗೆ ನಿ ।
ಸ್ತಾಣೆ ಚಿ । ದಂಬರ । ಪುರುಷಾ ॥

ಮೇಲಿನ ಗಣ ಚರಣ ವಿಭಾಗದಿಂದ ಸಾಂಗತ್ಯಕ್ಕೆ ನಾಲ್ಕು ಚರಣಗಳೆಂದೂ, ಮೊದಲನೆಯ ಮೂರನೆಯ ಚರಣಗಳಿಗೆ ನಾಲ್ಕು ನಾಲ್ಕು ಗಣಗಳೆಂದೂ, ಎರಡನೆಯ ನಾಲ್ಕನೆಯ ಚರಣಗಳಿಗೆ ಮೂರು ಮೂರು ಗಣಗಳೆಂದೂ ತಿಳಿದುಕೊಳ್ಳಬಹುದು.

ರಗಳೆ

ರಗಳೆಗಳಲ್ಲಿ ಅನೇಕ ಪ್ರಭೇದಗಳಿದ್ದರೂ ಕನ್ನಡದಲ್ಲಿ ಉತ್ಸಾಹ ಮಂದಾನಿಲ ಲಲಿತ ಎಂಬ ಮೂರು ರಗಳೆಗಳು ಮುಖ್ಯವಾದುವು. ಹಳೆಯ ಕಾವ್ಯಗಳಲ್ಲಿ ದೀರ್ಘವರ್ಣನೆಯನ್ನು ಮಾಡುವಾಗ ಕೆಲವು ವೇಳೆ ಕವಿಗಳು ಅದನ್ನು ರಗಳೆಯಲ್ಲಿ ರಚಿಸಿದುದುಂಟು. ರಗಳೆಗೆ ಇಂತಿಷ್ಟೆ ಚರಣಗಳೆಂಬ ನಿಯಮವಿಲ್ಲ. ಎತ್ತಿಕೊಂಡ ವಿಷಯಕ್ಕೆ

ತಕ್ಕಂತೆ ಎಷ್ಟು ಚರಣಗಳನ್ನೂ ರಚಿಸಬಹುದು. ಪ್ರಾಸವು ಕವಿಯಿಷ್ಟದಂತೆ ಇಡಲೂ ಬಹುದು, ಬಿಡಲೂ ಬಹುದು. ಹೆಚ್ಚಾಗಿ ಆದಿ ಅಂತ್ಯ ಪ್ರಾಸಗಳು ಇರುತ್ತವೆ.

ಉತ್ಸಾಹ ರಗಳೆ

ಉತ್ಸಾಹ ರಗಳೆಗೆ ಪ್ರತಿ ಚರಣಕ್ಕೂ ಮೂರು ಮಾತ್ರೆಯ ನಾಲ್ಕು ಗಣಗಳಿರುವುವು. ಕೆಲವು ವೇಳೆ ಪದ್ಯದ ಕೊನೆಯ ಭಾಗದ ಚರಣಗಳಲ್ಲಿ ಒಂದು ಮಾತ್ರೆ ಕುಂದಿಸುವುದುಂಟು. ಕೆಳಗಿನ ರಗಳೆ ರನ್ನನ ಅಜಿತಪುರಾಣದೊಳಗಿನದು. ಎರಡೆರಡು ಚರಣಗಳಿಗೆ ಆದಿ ಪ್ರಾಸವೂ ಅಂತ್ಯಪ್ರಾಸವೂ ಇವೆ.

ಅದರ | ಒಳಸಿ | ದುಪವ | ಸಂಗ
ಳುದಿತ | ಕೋಕಿ | ಲ ಸ್ವ | ನಂಗ
ಳಿಸೆವ | ಶೋಕ | ಚೂತ | ವನದ
ವಿಸುಪ | ವ ಕುಲ | ತಿಲಕ | ವನದ

. . . .

. . . .

ಬೀಸುತಿರ್ಪ ತಾಳ ವೃಂತ
ಮಾಸೆಯಾಗದಿರೆ ನಿತಾಂತ
ಮಾಸೆ ಮಾಡಲಾರೆವೆಂದು
ಬೇಸರೊದವೆ ಮನದೆ ನಿಂದು

ನಿಂದ | ಬಿರಯಿ | ಗದವ | ಳಲ್
ಕುಂದ | ದೆನಿಪ | ಪೊರವೊ | ಳಲ್

ಕೊನೆಯ ಎರಡು ಚರಣಗಳಿಗೆ ಒಂದೊಂದು ಮಾತ್ರೆ ಕಡಿಮೆ. ಹೀಗೆ ರೂಢಿಯಿದ್ದಂತೆ ಕಾಣುತ್ತದೆ. ಕಬ್ಬಿಗರ ಕಾವದ ಒಂದು ಉತ್ಸಾಹ ರಗಳೆಯ ಪದ್ಯದಲ್ಲಿಯೂ ಇದೇ ಕ್ರಮವು ಕಾಣುವುದು.

ತುಂಬಿ । ಏಂಡಿ । ನಂತೆ । ಪಾಡಿ ।
ಜಕ್ಕ । ವಕ್ಕಿ । ಯಂತೆ । ಕೂಡಿ ।
. . . .
ಪೊತ್ತ । ಸಿಂತು । ಕಳೆಯು । ತುಂ
ತೊಲಗ । ದಿರ್ದ । ರೆಸೆಯು । ತುಂ.

ಇದರಲ್ಲಿ ಆದಿಪ್ರಾಸವಿಲ್ಲ; ಆದರೆ ಅಂತ್ಯಪ್ರಾಸವಿದೆ.

ಮಂದಾನಿಲ ರಗಳೆ

ಮಂದಾನಿಲ ರಗಳೆಗೆ ಪ್ರತಿ ಪಾದದಲ್ಲಿ ನಾಲ್ಕು ಮಾತ್ರೆಯ ನಾಲ್ಕು ಗಣಗಳಿವೆ. ಹರಿಶ್ಚಂದ್ರ ಕಾವ್ಯದಲ್ಲಿ ಚಂದ್ರಮತೀವಿಲಾಪವನ್ನು ಕವಿ ಮಂದಾನಿಲ ರಗಳೆಯಲ್ಲಿ ವರ್ಣಿಸಿರುವನು. ಅಚ್ಚಾದ ಪ್ರತಿಯಲ್ಲಿ ಕೆಲವು ಚರಣಗಳಲ್ಲಿ ಮಾತ್ರೆಗಳು ಹೆಚ್ಚುಕಡಿಮೆ ಕಾಣುತ್ತವೆ. ಸರಿಯಾದ ಪ್ರತಿ ಸಿಕ್ಕದುದರ ದೋಷವಿರಬಹುದು. ಅವುಗಳಲ್ಲಿ ಸರಿಯಾಗಿರುವ ಕೆಲವು ಚರಣಗಳನ್ನು ಕೆಳಗೆ ಕೊಟ್ಟಿದೆ.

— — | ∪∪∪ ∪ | ∪ ∪ — | — —
ಬಾರೈ | ಬಹಳ ಸಿ | ರಿಯ ಸಿಂ | ಗಾರಾ
ಬಾರೈ । ಸುಜನ ಜ । ನಕ್ಕಾ । ಧಾರಾ
ಬಾರೈ । ಬಳಲಿದೆ । ಎಲೆ ಜಿತ । ಮಾರಾ
ಬಾರಳ । ಲಿಸದೆ । ನ್ನನು ಸುಕು । ಮಾರಾ
ಮುದ್ದುತ । ನದ ಮೋ । ಹದ ಮುಂ । ಗುಡಿಯೇ
ಎದ್ದು । ಪ್ಪೆನ್ನನು । ಎಳ ಲತೆ । ಗುಡಿಯೇ
. . . .
ಅಡವಿಯೊ । ಳೀ ಪರಿ । ಕೆಡೆವರೆ । ವೀರಾ ॥
ಪೊಡವಿಯೊ । ಡೆಯುನ । ಗ್ಗದ ಸುಕು । ಮಾರಾ ।

ಲಲಿತ ರಗಳೆ

ಲಲಿತ ರಗಳೆಗೆ ಚರಣವೊಂದಕ್ಕೆ ಐದು ಮಾತ್ರೆಯ ನಾಲ್ಕು ಗಣಗಳು. ಕೆಳಗೆ ಕೊಟ್ಟಿರುವ ಪದ್ಯವು ಕವಿಕುಂಜರನ ಲೀಲಾವತಿಯೊಳಗಣದು. ಪ್ರಾಸವನ್ನು ಆದಿಯಲ್ಲಾಗಲಿ ಅಂತ್ಯದಲ್ಲಾಗಲಿ ಕ್ರಮವಾಗಿಟ್ಟುಕೊಳ್ಳಲಿಲ್ಲ. ಕೆಲವು ಕಡೆ ಆದಿಪ್ರಾಸವೂ, ಮಧ್ಯಪ್ರಾಸವೂ ಕೆಲವು ಕಡೆ ಅಂತ್ಯಪ್ರಾಸವೂ ಕಾಣುತ್ತವೆ.

ಅಲ್ಲಿ ಲತೆ | ವನೆಯಲ್ಲಿ | ಮಲ್ಲಿಕಾ | ವನದಲ್ಲಿ |

ತಳಿರ ಕಾ | ವಣದಲ್ಲಿ | ಕುಳಿರ್ವ ತಿಳಿ | ಗೊಳದಲ್ಲಿ
ಸಂಪಗೆಯ | ಜೊಂಪದೊಳ್ | ಕಂಪಿಸುವ ಜಂಪದೊಳ್

ಸನಗೆ ಗೊಂ | ಚಲಂ ಮುಡಿದು | ವನದಲರ್ಗ | ಳಂ ಪಿಡಿದು
ಮಧುವಿಂಗೆ ಬೊಬ್ಬಿಟ್ಟು ಮಧುರತೆಗೆ ಮುಂಬಿಟ್ಟು
ತನಿಗಂಪ ಸಣ್ಪಿಕ್ಕಿ ವನಜದಲರಂ ಸೆಕ್ಕಿ
ಕೆಂದಳಿರ್ಗೆ ಕಣ್ಗಿಟ್ಟು ಕರ್ಣಪೂರಮನಿಟ್ಟು
ಕುಂದ ಕುಟ್ಮಲ ಮೌಕ್ತಿಕಾಭರಣಮಂ ತೊಟ್ಟು
ಮಾಮಿಡಿಗಳಂ ತೆಗೆದು ಪಚ್ಚೆಸಾರಮನಿಕ್ಕಿ
ಪೂಮುಡಿಗಳೊಳ್ ತಳಿರ ಲಂಬಣಮನೆಳಲಿಕ್ಕಿ
. . . .
ಸೊಬಗಿನಿಂ ಮದನಂಗೆ ಪೂಜೆಯಂ ಮಾಡಿದರ್
ವಿಬುಧವಿದ್ಯಾಧರನ ಗೀತಮಂ ಪಾಡಿದರ್

ಕೀರ್ತನೆಗಳು

ಕನ್ನಡದಲ್ಲಿ ಪುರಂದರ ದಾಸ ಮೊದಲಾದ ದಾಸರ ಕೀರ್ತನೆಗಳು ಹಲವಿವೆ. ಅವೆಲ್ಲಾ ಹಾಡುಗಳೇ; ಹೆಚ್ಚಾಗಿ ದೇವರ ಮುಂದೆ ನಿಂತು ಆವೇಶದಿಂದ ಹಾಡಿದವುಗಳು; ಬರೆದು ಹಾಡಿದುವಲ್ಲ—

ದಾಸರು ಹಾಡಿದ ಬಳಿಕ ಬಳಿಯುವರು ಬರೆದುಕೊಂಡು ಸಂಗ್ರಹಿಸಿ ದಂಥವುಗಳು. ಇವಕ್ಕೂ ತಾಳವೇ ಮುಖ್ಯವಾದುದರಿಂದ ಮಾತ್ರಾ ಗಣನೆಯಲ್ಲಿ ಹೆಚ್ಚುಕಡಿಮೆಯಾದರೂ ಹಾಡುವಾಗ ಸ್ವರವೆಳೆದು ಇಲ್ಲವೆ ಕುಗ್ಗಿಸಿ ಸರಿಮಾಡಿಕೊಳ್ಳಬೇಕು.

ಕೆಳಗೆ ನಿದರ್ಶನಕ್ಕಾಗಿ ಎರಡು ಹಾಡುಗಳ ಪಲ್ಲವಿಯು ಒಂದೊಂದು ನೊಲ್ಲನ್ನು ಕೊಟ್ಟಿರುತ್ತದೆ. ಪಲ್ಲವಿಯನ್ನು ಪ್ರತಿ ನೊಲ್ಲಿಗೆ ಸೇರಿಸಿ ಹಾಡುವುದು ಕ್ರಮ.

ಇಂದು ನಾ । ಳೆಗಳೆನ್ನ । ದೀಗಳೇ । ಸುಕೃತಪಡೆ ।
ಮುಂದಾವ । ಕಾಲಕೇ । ನೇನಹುದೊ । ಮನುಜಾ ॥ ಪಲ್ಲವಿ ॥

ತನುವೇನು । ಶಾಶ್ವತವೆ । ಮನಕೆ ನಿ । ಶ್ಚಲವಹುದೆ
ಧನವು ಕುಲ । ಗೀಯೆ ಯು । ತ್ನವ ಭಂಗ । ವಹುದೆ
ವನಿತೆಯನು । ಕೂಲಿಸಿಯೆ । ತನಯ ಸಾಜ್ಞಾಧರನೆ
ಜನರೊಲಿಮೆ । ನಿಜವೆ ವಾ । ಸನೆಯೇಕ । ಮುಖಿಯೆ

ಮೇಲೆ ಕೊಟ್ಟಿರುವ ಈ ಭಾಗದಲ್ಲಿ ಪ್ರತಿ ಗಣಕ್ಕೆ ಐದು ಐದು ಮಾತ್ರೆಗಳು–ಪ್ರತಿ ಚರಣಕ್ಕೆ ನಾಲ್ಕು ಗಣಗಳೂ, ಎರಡನೆಯ ನಾಲ್ಕನೆಯ ಚರಣದ ಕೊನೆಯ ಗಣಕ್ಕೆ ಒಂದು ಮಾತ್ರೆ ಕಡಿಮೆಯೂ ಕಾಣುವುವು. ಹಿಂದೆ ವಿವರಿಸಿದ ಎರಡನೆಯ ತರದ ಚೌಪದಿಯಂತೆ ಇದು ಇದೆಯೆನ್ನಬಹುದು.

ಇದ್ದ । ರೇನು । ಇಲ್ಲ । ದಿದ್ದ । ರೇನು ।
ಶುದ್ಧ । ವಾದ । ಲೋಭಿ । ಯೊಳು ।
ಬದ್ಧ । ವಾದ । ದ್ರವ್ಯ । ಗಳು
ಇದ್ದ । ರೇನು । ಇಲ್ಲ । ದಿದ್ದ । ರೇನು ॥ ಪಲ್ಲವಿ ॥

ಚಿಂತೆ । ಮಾಡಿ । ಬಹಳ । ಯೇ
ಕಾಂತ । ದೊಳಗೆ । ಯಿರಿಸಿಯಿರಿಸಿ
ಸಂತ । ತವದ । ನೋಡಿ । ನೋಡಿ
ಭ್ರಾಂತಿ ಬಡುವ । ಮನುಜ । ನೊಳು

ಹೊಸ ಮಟ್ಟುಗಳು

ಕನ್ನಡ ಕವಿತೆಯಲ್ಲಿ ಹಲವು ಹೊಸ ಮಟ್ಟುಗಳಾಗಿವೆ. ಯಾವ ಹೊಸ ಮಟ್ಟಾದರೂ ಗಣನಿಯಮಗಳಲ್ಲಿ, ಚರಣವಿಭಾಗದಲ್ಲಿ ಪ್ರಾಸಾಕ್ಷರಗಳ ಅಳವಡಿಕೆಯಲ್ಲಿ ಹೊಸ ರೂಪಗಳನ್ನು ತಾಳುವುವಲ್ಲದೆ, ಒಂದೊಂದು ಗಣಕ್ಕೆ ಮೂರು, ಯಾ ನಾಲ್ಕು, ಯಾ ಐದು ಮಾತ್ರೆಗಳೆಂಬ ಕ್ರಮವನ್ನು ಬಿಟ್ಟಿಲ್ಲ. ಕೆಳಗೆ ನಾಲ್ಕು ಹೊಸ ಮಟ್ಟುಗಳನ್ನು ಗಣವಿಭಾಗ ಮಾಡಿ, ಅವುಗಳ ಕ್ರಮವನ್ನು ವಿವರಿಸಿದೆ.

ಎಲ್ಲಿ | ಭೂರಮೆ | ದೇವ | ಸನ್ನಿಧಿ | ಬಯಸಿ | ಬಿಮ್ಮನೆ | ಬಂದ | ಳೋ
ಎಲ್ಲಿ | ಮೋಹನ | ಗಿರಿಯ | ಬೆರಗಿನ | ರೂಪಿ | ನಿಂದಲಿ | ನಿಂದ | ಳೋ
ಎಲ್ಲಿ | ಮುಗಿಲಲಿ ಮಿಂಚಿ | ನೊಲ್ ಕಾ | ವೇರಿ | ಹೊಳೆ ಹೊಳೆ | ಹೊ
ಳೆವ | ಳೋ
ಎಲ್ಲಿ | ನೆಲವನು ತಣಿಸಿ | ಜನಮನ | ಹೊಲದ | ಕಳೆ ಕಳೆ | ಕಳೆವ | ಳೋ

ಅಲ್ಲೆ | ಆಕಡೆ | ನೋಡ | ಲಾ
ಅಲ್ಲೆ | ಕೊಡಗಿನ | ನಾಡ | ಲಾ
ಅಲ್ಲೆ | ಕೊಡವರ | ಬೀಡ | ಲಾ

ಇದು ಹುತ್ತರಿ ಹಾಡಿನ ಮೊದಲನೆಯ ಪದ್ಯವು. ಮೊದಲನೆಯ ಚರಣವನ್ನು ಗಣವಿಭಾಗ ಮಾಡಿ ಲಘು ಗುರು ಗಣನೆಯನ್ನು ಅಲ್ಲಿ ಕಾಣಿಸಿರುತ್ತದೆ. ಮೂರು, ನಾಲ್ಕು ಮಾತ್ರೆಗಳ ಗಣಗಳು ಕ್ರಮವಾಗಿ ಏಳಾದ ಮೇಲೆ ಒಂದು ಗುರು ಹೆಚ್ಚಿದೆ. ಈ ಅಳತೆಯ ನಾಲ್ಕು ಚರಣಗಳಾದ ಮೇಲೆ ಮೂರು ನಾಲ್ಕು ಮಾತ್ರೆಗಳ ಕ್ರಮದಲ್ಲಿಯೆ ಮೂರು ಗಣಗಳಿದ್ದು ಕೊನೆಗೆ ಒಂದು ಗುರು ಕೂಡಿದ ಮೂರು ಚರಣಗಳು ಬರುವುವು. ಇದನ್ನು **ಸಪ್ತಪದಿ** ಎನ್ನಬಹುದು.

ಭರತ | ಮಾತೆಯೆ | ಭರತ | ಮಾತೆಯೆ | ಎಂದು | ನೀತಲೆ | ಯೆತ್ತು | ವೆ
ಎಂದು ಲೋಕದ ಜನರ ಹೃದಯದಿ ನಿನ್ನ ಮಹಿಮೆಯ ಬಿತ್ತು | ವೆ.
ಎಂದು | ಮಲಿನತೆ | ನೀಗು | ವೆ — ಮಂಗು
ಳೆಂದು | ನಗುಮುಖ | ವಾಗು | ವೆ.

ಇದು ಭರತ ಮಾತೆಯ ಮೊದಲನೆಯ ಪದ್ಯ. ಚರಣಗಳು ನಾಲ್ಕು. ಮೊದಲನೆಯ ಎರಡು ಚರಣಗಳಿಗೆ ಅಳತೆಯೊಂದೇ:— ಮೂರು ಮಾತ್ರೆಯ ನಾಲ್ಕು ಮಾತ್ರೆಯ ಏಳು ಗಣಗಳು ಕ್ರಮವಾಗಿ ಬಂದ ಮೇಲೆ ಚರಣದ ಕೊನೆಗೆ ಒಂದು ಗುರುವನ್ನು ಕೂಡಿರುವವು. ಮೂರನೆಯ ಚರಣದಲ್ಲಿ ಮೂರು ನಾಲ್ಕು ಮಾತ್ರೆಗಳ ಕ್ರಮದಲ್ಲಿ ನಾಲ್ಕು ಗಣಗಳೂ, ನಾಲ್ಕನೆಯ ಚರಣದಲ್ಲಿ, ಅದೇ ಕ್ರಮದಲ್ಲಿ ಮೂರು ಗಣಗಳಾದ ಮೇಲೆ ಒಂದು ಗುರುವೂ ಇವೆ.

ಬಣ್ಣದ | ಹಕ್ಕಿ
ಮರಿಮಿಂ | ಚುಳ್ಳಿ
ನಿನ್ನ | ತಾಯಿ | ಕಾಮನ | ಬಿಲ್ಲೆ
ನೀಲಿಯೊ | ಹಸುರೊ
ಹಳದಿಯೊ | ಕಿಸುರೊ
ನಿನಗೀ | ಮಿನುಗಾ | ಕೆಯಿ ಸ | ಲ್ಲೆ
ಕರಗುವ | ಹಗಲಿನ |
ಮಿರುಗುವ | ಮುಗಿಲಿನ |
ಬೆರಕೆಯ | ಬಣ್ಣದ | ಬೆಂಕೆಯ | ಲಿ

ಸಿಡಿತಹ | ಮಿಣ್ಣನೆ |
ಕಿಡಿಯನೆ | ಸುಣ್ಣನೆ |
ಲಹರಿಪೆ | ವಿಹರಿಪೆ | ರೆಂಕೆಯ | ಲಿ

ಇದು ಮಿಂಚುಳ್ಳಿಯ ಪ್ರಾರಂಭದ ಮತ್ತು ಅದರೊಳಗಿನ ಒಂದು ಪದ್ಯವು ಕೂಡಿ ಎರಡು ಪದ್ಯಗಳು. ಪಾದಗಳು ಆರು. ಮೊದಲಿನ ಎರಡು ಚರಣಗಳಿಗೆ ಒಂದು ಅಂತ್ಯ ಪ್ರಾಸ, ಮೂರನೆಯ ಆರನೆಯ ಚರಣಗಳಿಗೆ ಒಂದು ಅಂತ್ಯಪ್ರಾಸ, ನಾಲ್ಕನೆಯ ಐದನೆಯ ಚರಣಗಳಿಗೆ ಒಂದು ಅಂತ್ಯಪ್ರಾಸ–ಈ ಕ್ರಮದ ಪ್ರಾಸವನ್ನು ಕೊನೆಯುವರೆಗೂ ಪಾಲನ ಮಾಡಿಯದೆ.

ಮೊದಲನೆಯ ಎರಡನೆಯ ನಾಲ್ಕನೆಯ ಐದನೆಯ ಚರಣಗಳಿಗೆ ಎರಡೆರಡು ಗಣಗಳೂ, ಮೂರನೆಯ ಆರನೆಯ ಚರಣಗಳಿಗೆ, ಕೆಲವು ಕಡೆಗಳಲ್ಲಿ ನಾಲ್ಕು ಗಣಗಳೂ ಕೆಲವು ಕಡೆಗಳಲ್ಲಿ ಮೂರು ಗಣಗಳಾದ ಮೇಲೆ ಒಂದು ಗುರುವೂ ಇವೆ. ಆ ಹಕ್ಕಿಯ ಹಾರಾಟಕ್ಕೆ ತಕ್ಕದಾದ ಭಾವನೆಯಲ್ಲಿ ಬರೆದುದರಿಂದ ಪದ್ಯದ ಓಟವೂ ಹಾಗಿದ್ದು ಗಣಗಳಲ್ಲಿಯೂ ಗಣಗಳ ಮಾತ್ರೆಗಳಲ್ಲಿಯೂ ಸ್ವಲ್ಪ ಹೆಚ್ಚು ಕಡಿಮೆ ಮಾಡಿದಂತೆ ಕಾಣುತ್ತದೆ. ಕೆಲವು ಕಡೆ ಗಣಗಳಿಗೆ ಮೂರು ಮಾತ್ರೆಗಳು ಕೆಲವು ಕಡೆ ಸರಾಗವಾಗಿ ನಾಲ್ಕು ಮಾತ್ರೆಗಳೂ ಇವೆ.

ಪಡುವಣ | ಕಡಲಿನ |
ತೆಂಗಿನ | ಮಡಲಿನ |
ಮರೆಯಲಿ | ಮರೆವುದು | ನಾಡೊಂ | ದು
ಸೃಷ್ಟಿಯ ಮಾತೆಯ
ವಿಲಾಸಲು ಸೊಬಗಿನ
ಕೊದಿಕೆಯು | ಹೊದ್ದಿಹ | ಬೀಡೊಂ | ದು

ಈ ಪದ್ಯವು 'ಹೊನ್ನಿಯ ಮದುವೆ'ಯ ಮೊದಲಲ್ಲಿದೆ. ಇದಕ್ಕೆ ಚರಣಗಳು ಆರು. ಸರ್ವತ್ರ ನಾಲ್ಕು ಮಾತ್ರೆಯ ಗಣಗಳೇ ಬರುವುವು. ಮೂರನೆಯ ಚರಣಗಳಿಗೆ ಒಂದೊಂದು ಗುರು ಹೆಚ್ಚು. ಒಂದನೆಯ ಎರಡನೆಯ ನಾಲ್ಕನೆಯ ಐದನೆಯ ಚರಣಗಳಿಗೆ ಎರಡೆರಡು ಗಣಗಳು; ಮೂರನೆಯ ಆರನೆಯ ಚರಣಗಳಿಗೆ ಮೂರು ಗಣಗಳ ಮೇಲೆ ಒಂದು ಗುರು ಹೆಚ್ಚು.

೧

ಮಲ್ಲಿಗೆಯ | ಮೊಗ್ಗೆಯಿದು |
ಅರಳಿರುವು | ದಲ್ಲ,
ಮಾಲತಿಯು | ಮಕರಂದ |
ಹೊರ ಸೂಸಿ | ತಲ್ಲ!
ಎನ್ನ ಜೀ | ವನ ಲತೆಯ
ಹೂವರಳ | ಲಿಲ್ಲ
ಬಣ್ಣ ಬಣ್ಣ | ದ ಕನಸು |
ಕಣ್ತೆರೆಯು | ಲಿಲ್ಲ

೨

ಯೌವನವೆ | ನಿನಗೇಕೆ
ಸುಡುಗಾಡ | ಚಿಂತೆ,
ಜೀವ ವಾ | ಹಿನಿಯತ್ತ
ಲಡಿಯಿಡುವ | ಮುಂತೆ?

ಮೇಲಿನದು ಒಂದು ಭಾವಗೀತ. ಆ ಭಾವಕ್ಕೆ ತಕ್ಕಂತೆ ಅದರ ಅಂಗವಳವಟ್ಟಿದೆ. ಪದ್ಯಕ್ಕೆ ಚರಣಗಳ ನಿಯಮವಿಲ್ಲ. ಮೊದಲನೆಯ ಪದ್ಯಕ್ಕೆ ಚರಣಗಳು ಎಂಟು; ಎರಡನೆಯ ಪದ್ಯಕ್ಕೆ ಚರಣ

ಗಳು ನಾಲ್ಕ. ಒಂದನೆಯ ಚರಣದಲ್ಲಿ ಐದು ಮಾತ್ರೆಯ ಎರಡು ಗಣಗಳು, ಎರಡನೆಯ ಚರಣದಲ್ಲಿ ಐದು ಮಾತ್ರೆಯ ಒಂದು ಗಣವಾದ ಮೇಲೆ ಮೂರು–(ಅಥವಾ ಹಾಡುವ ಕ್ರಮದಲ್ಲಿ ಅದನ್ನೇ ನಾಲ್ಕು ಎಂದೂ ಇಟ್ಟುಕೊಳ್ಳಬಹುದು)–ಮಾತ್ರೆಗಳ ಒಂದು ಗಣ. ಇದೇ ಕ್ರಮವು ಬೆಸ ಸರಿ ಚರಣಗಳಲ್ಲಿ ಕಾಣುವುವು.

ಹೆಜ್ಜೆಯ | ಹಾಕುತ | ಬನ್ನಿರಿ | ಮುಂದೆ |
ನೋಡಲು | ದಸರೆಯ | ಹಬ್ಬವ | ನು
ಉತ್ಸಾ | ಹ ದ ಕಿರು | ಗೆಜ್ಜೆಯ | ಕಟ್ಟಿ
ಹಾಡಿರಿ | ನಾಡಿನ | ಕಬ್ಬವ | ನು
ಹಬ್ಬಗ | ಳೆಲ್ಲಾ | ದಸರೆಯ | ಹಬ್ಬ
ಕಬ್ಬಗ | ಳೆಲ್ಲಾ | ರನ್ನನ | ಕಬ್ಬ
ತಿಂಡಿಗ | ಳೆಲ್ಲಾ | ಬುಂದಿಯ | ಲಾಡು
ಧರೆಯೊಳ | ಗೆಲ್ಲಾ | ಕನ್ನಡ | ನಾಡು
ನಾಡಿನ | ಹಾಡನು | ಹಾಡುತ | ಬನ್ನಿ
ದಸರೆಯ ಹಬ್ಬವ ನೋಡಲು ಬನ್ನಿ

ಮೇಲಿನ ಪದ್ಯವು ತರುಣರ ದಸರೆಯ ಪ್ರಾರಂಭದ ಪದ್ಯವು. ಇದೊಂದು ಲಾವಣಿಯ ಕ್ರಮ. ಪದ್ಯಕ್ಕೆ ಇಂತಿಷ್ಟೆ ಚರಣಗಳೆಂಬ ನಿಯಮವಿಲ್ಲ. ಸ್ಫೂರ್ತಿಬಂದಂತೆ ಹಾಡುವ ಮಟ್ಟಾದುದರಿಂದ ಸ್ಫೂರ್ತಿನಿಂತಲ್ಲಿ ಹಾಡುನಿಲ್ಲುವುದು. ಗಣಗಳ ಮಾತ್ರಾನಿಯಮವು ಎಲ್ಲಾ ಪದ್ಯಗಳಲ್ಲಿ ಒಂದೇಯಾಗಿಲ್ಲ. ಇಲ್ಲಿ ಉದ್ಧರಿಸಿದ ಪದ್ಯಕ್ಕೆ ನಾಲ್ಕು ಮಾತ್ರೆಯ ಗಣಗಳೇ ಹೆಚ್ಚು ಕಾಣುವುವು, ಕೆಲವು ಚರಣಗಳ ಕೊನೆಗೆ ಮೂರು ಮಾತ್ರೆಯ ಗಣವೂ ಕೆಲವು ಚರಣಗಳ ಕೊನೆಗೆ ಒಂದೊಂದು ಗುರುವೂ ಇರುತ್ತವೆ.

ಹೊಸಗನ್ನಡದಲ್ಲಿ ವಿಪ್ರಾಸವೃತ್ತಗಳೂ ಪ್ರಸಿದ್ಧಿಗೆ ಬಂದಿರುವುವು. ಇವನ್ನು ಮುಖ್ಯವಾಗಿ ನಾಟಕದಲ್ಲಿ ಉಪಯೋಗಿಸುವರು. ಚರಣವನ್ನು ಸುಖವಾಗಿ ಎಲ್ಲಿಯೂ ಮುರಿಯಬಹುದಾದುದರಿಂದ ನಾಟಕದಲ್ಲಿ ಒಂದೇ ಚರಣವನ್ನು, ಅಂತಹ ಸಂದರ್ಭದಲ್ಲಿ ಭಿನ್ನ ಜನರ ಬಾಯೊಳಗಿಂದ ಬಂದಂತೆ ಅಳವಡಿಸಬಹುದು. ಈ ಕೆಳಗೆ ಕೊಟ್ಟಿರುವ ವಿಪ್ರಾಸ ವೃತ್ತವು '**ಹೆಬ್ಬೆರಳು**' ಎಂಬ ನಾಟಕದಿಂದ ಉದ್ಧೃತವಾಗಿದೆ. ಭಾವಕ್ಕೆ ತಕ್ಕಂತೆ ಅದು ಎಷ್ಟು ಪ್ರವಹಿಸಬಹುದು. ಅದಕ್ಕೆ ಚರಣನಿಬಂಧನೆಯಿಲ್ಲ. ಪ್ರತಿ ಚರಣಕ್ಕೂ ಐದು ಮಾತ್ರೆಗಳ ನಾಲ್ಕು ಗಣಗಳಿವೆ. ಪ್ರಾಸವಿಲ್ಲದುದರಿಂದಲೇ ಇದಕ್ಕೆ ವಿಪ್ರಾಸವೆಂದು ಹೆಸರು

ಸೋಡೀಗ | ಗೋವುಗಳ | ವೇವಿಗ | ಟ್ಟವ ಹೊತ್ತು
ಕೊಳಲದನಿ। ಸೂಸುತಿದೆ,। ತುರುಗುಂಪು। ಬೀಸುತ್ತಿದೆ;।
ಹಾಡುತಿವೆ ಹಕ್ಕಿ. ಓಡಾಡುತಿವೆ ರುರುರಾಜಿ;
ನೇಸರಿದೊ ತಣ್ಬಿಸಿಲ ಬೆಳ್ಮಳೆಯ ಕರೆಯುತಿದೆ,
ಅಳಿವಿಂಡ ತೊಟ್ಟಿಲಾಡುತಿದೆ ತಾವರೆವಿಂಡು,
ತಣ್ಣೆಲರು ತೀಡುತಿದೆ, ಪಯಣಕಿದೆ ಸಿರಿ ಹೊತ್ತು—

ಏಕಲವ್ಯ:— ಪೊಡಮಡುವೆ ತಮ್ಮಡಿಗೆ.
ದ್ರೋಣ:— ಮಂಗಳಾನಿಭವಂತು!
ಏಕಲವ್ಯ:— ಏನಪ್ಪಣೆಯೊ ದೇವ ನನ್ನ ಬೇಡಿಕೆಗೆ?
ದ್ರೋಣ:— ಇದೊ

ಮೇಲೆ ಕೊಟ್ಟ ಎರಡು ಚರಣಗಳು ಅದೇ ನಾಟಕದ ಏಕಲವ್ಯ ದ್ರೋಣರ ಮಾತುಕತೆಯ ಒಂದು ಭಾಗ. ವಿಪ್ರಾಸವೃತ್ತವು ಹೇಗೆ ಭಿನ್ನ ಜನರ ಮಾತುಗಳಾಗಿ ಅಳವಡಿಸಬಹುದೆಂದು ಅಲ್ಲಿ ಕಾಣಬಹುದು.

ಅಭ್ಯಾಸ

ಕೆಳಗೆ ಕೊಟ್ಟಿರುವ ಪದ್ಯಗಳನ್ನು ಗಣ ವಿಭಾಗವಮಾಡಿ, ಒಂದೊಂದು ಗಣಕ್ಕೆ ಎಷ್ಟೆಷ್ಟು ಮಾತ್ರೆಗಳು ಉಂಟೆಂದು ನೋಡಿ ಆ ಪದ್ಯದ ಲಕ್ಷಣವನ್ನು ಹೇಳಿರಿ.

೧. ಕೋಗಿಲೆ

ಆವ ಕಬ್ಬಿಗನಿವನು?
ಮಾಮರದ ಕೆಂದಳಿರ
ತೂಗು ಮುಯ್ಯಲೆಯೊಳಗಣ
ಜೀವಿಗಳ ಬಗೆವನೆಯ
ಸೋಪಿನುರಿಯನು ತವಿಸಿ,
ನೋಡದಕೊ! ಹಾಡುತಿಹನು?

೨. ಬನದ ಕುಸುಮ

ಯಾರಿಗಾಗಿ ಅರಳಿ ನಿಂತು,
ಇಂತು ಮೆರೆಯುವೆ?
ಯಾರ ದಾರಿ ಕಾಯ್ದು ಕಾಯ್ದು,
ವಿಫಲವಾಗಿ ಮನದಿ ನಿಂದು,
ಮುಂದೆ ಬಾಳು ಸಲ್ಲದೆಂದು,
ಬಾಡಿ ಬಾಳುವೆ.
ಸತ್ಯವಾಗಿ ಪೇಳು ಬನದಿ
ಬೆಳೆದ ಕುಸುಮವೆ.

೪. ನಿಟ್ಟುಸಿರು

ಚಿಂತೆಯು ಮುಡಿದಿಹ ವಿಧವಿಧ ಸುಮಗಳ
ಸಂತೆಯೊಳೆಲ್ಲಿಯು ಸುಳಿಸುಳಿದು,
ಎಂತಹುದೋ ಹೊಸ ಕಂಪನು ಹರಡುತೆ
ಬಂತೈ ಗಾಳಿಯ ತೆರೆಯೊಂದು;
ಅದಕೆಂದಿತು ಜನ 'ನಿಟ್ಟುಸಿರು'
ಶಾಂತಿಯು ಮೊಳೆಗಾಯ್ತದು ಕಸರು.

ಹದಿನಾಲ್ಕನೆಯ ಅಧ್ಯಾಯ

ಅಲಂಕಾರಗಳು

ಅಲಂಕಾರವೆಂದರೆ ಒಂದು ಮಾತಿನಲ್ಲಿರುವ ಶಬ್ದ ಅಥವಾ ಅರ್ಥ ಚಮತ್ಕಾರವು. ಹಿಂದೆ ಹೇಳಿದ ಪ್ರಾಸವು ಶಬ್ದಾಲಂಕಾರಗಳಲ್ಲಿ ಒಂದು.

ಅರ್ಥಾಲಂಕಾರಗಳು ಹಲವಿವೆ. ಅವುಗಳಲ್ಲಿ ಉಪಮಾಲಂಕಾರವು ಶ್ರೇಷ್ಠವಾದುದು.

ಒಂದು ವಸ್ತುವನ್ನು ಸಮಾನವಾದ ಇನ್ನೊಂದು ವಸ್ತುವಿನೊಡನೆ ಹೋಲಿಸಿದರೆ ಉಪಮಾಲಂಕಾರವಾಗುವುದು.

ಹೃದಯಂಗಮವಾದ ಸಾದೃಶ್ಯವು ಎಂದರೆ ಒಂದು ಸಮಾನ ಗುಣವು ಎರಡು ವಸ್ತುಗಳಲ್ಲಿರಬೇಕು. ಇದು ಈ ಅಲಂಕಾರದ ಮುಖ್ಯ ಅಂಗವು. ಈ ಸಮಾನ ಗುಣವನ್ನು ಸಮಾನಧರ್ಮ ಎನ್ನುವರು.

ಯಾವ ವಸ್ತುವನ್ನು ಹೋಲಿಸುತ್ತೇವೆಯೋ ಅದನ್ನು **ಉಪಮೇಯ** ಎನ್ನುವರು. ಯಾವ ವಸ್ತುವಿನೊಡನೆ ಹೋಲಿಸುತ್ತೇವೆಯೋ ಆ ವಸ್ತುವನ್ನು **ಉಪಮಾನ**ವೆನ್ನುವರು. ಆ ವಸ್ತುಗಳಿಗೆ ಹೋಲಿಕೆಯನ್ನು ಹೇಳುವ ಅಂತೆ, ಹಾಗೆ, ಪೋಲ್ ಇತ್ಯಾದಿ ಪದಗಳನ್ನು **ಉಪಮಾವಾಚಕ**ವೆಂದು ಹೇಳುವರು.

ಉದಾ:—

'ಆಹಾ! ಈ ಮಗನು ನಮ್ಮ ಕುಲಕ್ಕೆ ಕೊಡಲಿಯ ಕಾವಿನಂತೆ ಘಾತುಕನಾದನು.'

ಇದ ಮಗನು, ಉಪಮೇಯವು. ಕೊಡಲಿಯ ಕಾವು, ಉಪಮಾನವು. ಘಾತುಕತ್ವವು ಸಮಾನಧರ್ಮವು. ಅಂತೆ ಉಪಮಾವಾಚಕವು.— ಆದುದರಿಂದ ಇದು ಉಪಮಾಲಂಕಾರವು.

'ಕರ್ಣನು ಭುಜಬಲದಿಂದ ಪಡೆದ ಒಡವೆಯನ್ನು, ಪಡೆದ ಹೆಣ್ಣನ್ನು ಕೊಡುವಂತೆ ಬೇಡಿದವರಿಗೆ ಕೊಡುವನು.

ಒಡವೆ ಉಪಮೇಯವು. ಹೆಣ್ಣು ಉಪಮಾನವು. ಬೇಡಿದವರಿಗೆ ಕೊಡುವುದು ಸಮಾನಧರ್ಮವು. ಅಂತೆ ಎಂಬುದು ಉಪಮಾವಾಚಕವು.—ಆದುದರಿಂದ ಇದು ಉಪಮಾಲಂಕಾರವಾಯಿತು.

ಉಪಮೆಗೆ ಬೇರೆ ಕೆಲವು ಉದಾಹರಣೆಗಳು:—

'ಒರೆಯೊಳಿರ್ದಾಯುಧದಂತೆ, ಕಾರ್ಮುಗಿಲಿನ ಮರೆಯೊಳಗಿಹ ಸೂರ್ಯನಂತೆ ಹೊರಗೆ ಕಷ್ಮಲದ ವ್ಯೆಯಹುದು ಒಳಗಾತ್ಮನು ಕರೆವುತಿಹನು ತಿಳಿವೆಳಗಾ'.

ಅಂಬುಜವೆಲ್ಲವು ರವಿಯ ನೋಳ್ಪಂತೆ, ನೀಲಾಂಬುಜ ನೋಳ್ಪಂತೆ ಶಶಿಯಾ. ತುಂಬಿದ ಸಭೆಯೆಲ್ಲ ನೃಪನ ನೋಡುತಿರ್ದುದು.

ಮುಗಿಲ ತೆರೆ ಸರಿದ ಶಶಿಯಂತೆ, ತಮಂ ತೆಗೆದ ತರುಣತರಣಿಯಂತೆ, ಪೊಗೆ ತಗ್ಗಿದಗ್ನಿಯಂತೆ ವೇಷಂ ತೊಲಗಿದ ರುದ್ರಂ ತೊಳಗುತಿರ್ದಂ.

ರೂಪಕವು ಇನ್ನೊಂದು ಪ್ರಸಿದ್ಧ ಅಲಂಕಾರವು. ಸಾದೃಶ್ಯವುಳ್ಳ ವಸ್ತುಗಳನ್ನು ಒಂದು ಇನ್ನೊಂದರ ಹಾಗಿದೆ ಎಂದೆನ್ನದೆ, ಒಂದು ಇನ್ನೊಂದು ವಸ್ತುವೇ ಎಂದು ಭೇದವಿಲ್ಲದೆ ಎನ್ನುವುದು; ಅಥವಾ ಒಂದು ಇನ್ನೊಂದು ವಸ್ತುವೆಂದು ನಿರೂಪಣ ಮಾಡುವುದು ರೂಪಕಾಲಂಕಾರವು.

ಈ ಅಲಂಕಾರಕ್ಕೂ ಸಾದೃಶ್ಯವು ಮೂಲವಾಗಿದೆ. ಅದಿಲ್ಲದೆ ರೂಪಕವಿಲ್ಲ. ಈ ಮಗನು ಕೊಡಲಿ ಕಾವಿನಂತಾದನು ಎಂದು ಹೇಳುವುದರ ಬದಲಾಗಿ ಈ ಮಗನು ಕೊಡಲಿ ಕಾವೇ ಎಂದು ಹೇಳಿದರೆ ರೂಪಕವಾಯಿತು. ಕೊಡಲಿಯ ಕಾವಿಗೂ ಮಗನಿಗೂ ಅಭೇದ ಹೇಳಿದಂತಾಗುವುದರಿಂದ ಇದು ಅಭೇದ ರೂಪಕವಾಯಿತು. ಹಾಗೆಯೂ ಹೇಳದೆ ಈ ಮಗನೆಂಬ ಕೊಡಲಿಯ ಕಾವು—ಎಂದು ಹೇಳಿದರೆ ಮಗನು ಇತರರ ಕಣ್ಣಿಗೆ ಮಗನಾಗಿ ತೋರಿದರೂ ತನ್ನ ಕಣ್ಣಿಗೆ ಕೊಡಲಿಕಾವೆ ಎಂಬ ಅರ್ಥವಾಗುವುದರಿಂದ ಇದು ಭೇದರೂಪಕವೆನ್ನಿಸುವುದು.

ರೂಪಕಕ್ಕೆ ಕೆಲವು ಉದಾಹರಣೆಗಳು:–

'ಕಂದ ಬಾ, ಎನ್ನಾನೆ, ನಿರ್ಜರವೃಂದ ಮಸ್ತಕಶೂಲ ಬಾ, ದನುಜಕುಲ ಕುಮುದಚಂದ್ರಮನೆ ಬಾ, ವೈರಿತಮದಿವಸೇಂದ್ರ ಬಾ.'

'ಆದೊಡೆಲೆ ಪ್ರಹ್ಲಾದ ಕೇಳೈ ಬೂದಿ ಮುಚ್ಚಿದ ಕೆಂಡವಾ ಮಧುಸೂದನನು'.

'ದುರ್ಜನರ ಮಾತಿನ ಬಾಣ ತಾಗಿದರೆ ತೆರಳದಾ ವ್ಯಥೆ.'

'ತನುಕಾಂತಿ ತುಂಬಿದ ಸಭೆಯೆಂಬ ಕೊಳದಲ್ಲಿ ಕನಕಸಿಂಹಾಸನವೆಂಬ ಕನಕಾಂಬುಜದ ಮೇಲೆ ಆ ರಾಜಹಂಸನಿದ್ದನು.'

ಉತ್ಪ್ರೇಕ್ಷೆ

ಉತ್ಪ್ರೇಕ್ಷೆ ಇನ್ನೊಂದು ಅಂದವಾದ ಅಲಂಕಾರವು. ಒಂದು ವಸ್ತುವನ್ನು ಇದ್ದ ಹಾಗೆ ಹೇಳದೆ ಇನ್ನೊಂದು ವಸ್ತುವಾಗಿ ಸಂಭಾವನೆ ಮಾಡಿದರೆ ಅದು ಉತ್ಪ್ರೇಕ್ಷಾಲಂಕಾರವಾಗುವುದು.

'ಶಶಿ ಬಂದನಿಂದು ವಾರಿಧಿ ನರರ ದೃಷ್ಟಿ ತಾಗುವುದೆಂದು ಆ ಶಶಿಗೆ ನಿವಾಳಿಸಿ ಚೆಲ್ಲಿದ ಹೊಸ ಮುತ್ತಿನ ಸೇಸೆಯೆಂಬಂತೆ ನಕ್ಷತ್ರಗಳು ಶೋಭಿಸಿದುವು.'

ಕತ್ತಲಾದೊಡನೆ ನಕ್ಷತ್ರಗಳು ಮೂಡಿದುವು ಎಂದು ಹೇಳದೆ ಮೂಡುವ ಚಂದ್ರನಿಗೆ ಜನರ ದೃಷ್ಟಿ ತಾಗದಂತೆ ವಾರಿಧಿ ತನ್ನ ಮಗನಾದ ಚಂದ್ರನಿಗೆ ನಿವಾಳಿಸಿ ಚೆಲ್ಲಿದ ಹೊಸ ಮುತ್ತಿನ ಸೇಸೆಯಿದು ಎಂಬಂತೆ ನಕ್ಷತ್ರಗಳು ಶೋಭಿಸಿದುವು, ಎಂದು ಹೇಳಿದುದರಿಂದ ಇಲ್ಲಿ ನಕ್ಷತ್ರಗಳನ್ನು ಮುತ್ತುಗಳ ಸೇಸೆಯಂತೆ ಸಂಭಾವಿಸಿದಂತಾಯಿತು. ಆದುದರಿಂದ ಇದು ಉತ್ಪ್ರೇಕ್ಷಾಲಂಕಾರವು.

ಇದಲ್ಲದೆ ಅಲ್ಲದುದನ್ನು ಕಾರಣವೆಂದು ಹೇಳುವುದೂ, ಇಲ್ಲದುದನ್ನು ಫಲವೆಂದು ಹೇಳುವುದೂ ಉತ್ಪ್ರೇಕ್ಷಾಲಂಕಾರವಾಗುವುದು.

ಅತಿಶಯೋಕ್ತಿ

ಅತಿಶಯೋಕ್ತಿ ಬಹುವಾಗಿ ಉಪಯೋಗವಾಗುವ ಇನ್ನೊಂದು ಅಲಂಕಾರವು. ಇದರಲ್ಲಿ ಹಲವು ವಿಧಗಳುಂಟು. ಕಾರಣಕ್ಕಿಂತ ಕಾರ್ಯವು ಮೊದಲಾಯಿತೆಂದು ಹೇಳಿದರೆ ಅದು ಒಂದು ರೀತಿಯ ಅತಿಶಯೋಕ್ತಿಯೆನಿಸುವುದು.

'ಹೋ! ಹೋ! ಅರ್ಜುನನು ಬರುತ್ತಿದ್ದಾನೆ; ಮಾತು ನಿಲ್ಲಲಿ, ಮಾತು ನಿಲ್ಲಲಿ' ಎಂಬ ಮಾತು ಹಿಂದಾಯಿತು,—ಅದಕ್ಕೆ ಮೊದಲೇ ಸಭೆ ಮೌನವಾಗಿತ್ತು!'

ಗುರಿಯಿಟ್ಟು ಹೊಡೆವಾಗ ಕಲ್ಲು ಕೈಯನ್ನು ತೊಲಗಲಿಲ್ಲ; ಹಣ್ಣು ಕೆಳಕ್ಕೆ ಉದುರಿತು!'

ಅಭ್ಯಾಸ

ಕೆಳಗಿನ ಮಾತುಗಳಲ್ಲಿರುವ ಅಲಂಕಾರಗಳನ್ನು ಗುರುತಿಸಿರಿ.

೧. ಸರಸಿಜಗಳು ಬಳಸಿರೆ ನಟ್ಟನಡುವೆ ತೋರ್ಪ ಅರಸಂಚೆಯಂತೆ ಅರಸಿಯುರೋಲಗದೊಳು ರಾಜೇಂದ್ರನು ಇದ್ದನು.

೨. ನಾಡೆರೆಯನ ಚಿತ್ತಲತೆಗೆ ಸದ್ಧರ್ಮಾಮೃತ ಬಲವನೆರೆದು ಸಲಹಬೇಕು.

೩. ಕಳೆದ ಕೈದುಗಳೊರೆಗಳೊ ಮೌಕ್ತಿಕರಹಿತಶುಕ್ತಿಗಳೊ ಎಂಬಂತೆ ದುರ್ಯೋಧನ ಕರ್ಣರ ಮನೆಗಳಿದ್ದವು.

೪. ನೋಡೆಂದು ಕೃಷ್ಣನು ಬಾಯನ್ನು ತೆರೆಯುವುದುಂ ಸಪ್ತಸಮುದ್ರಗಳನ್ನೂ ಸಪ್ತಕುಲಪರ್ವತಗಳನ್ನೂ ಹದಿನಾಲ್ಕು ಲೋಕಗಳನ್ನೂ ಒಮ್ಮೆಲೇ ನೋಡಿ, ಬಾಯನ್ನು ಮುಚ್ಚು ಮುಚ್ಚು ಎಂದು ಯಶೋದೆ ಅಚ್ಚರಿಪಟ್ಟು ನುಡಿದಳು.

೫. ಕೋಗಿಲೆಯ ದನಿಯಂತೆ ಕೇಗು ಹಾಕುವ ನಿನ್ನ ರಾಗವಂ ನಾನಿನ್ನು ಕೇಳ್ವುದೆಲ್ಲಿ?

೬. ಸೂರ್ಯನು ಆಕಾಶದಿಂದ ಸಮುದ್ರದೊಳಗೆ ಬಿದ್ದಾಗ ಎದ್ದ ಸೀರ್ಪನಿಗಳಿವು ಎಂಬಂತೆ ನಕ್ಷತ್ರಗಳು ಎಸೆದುವು.

೭. ನೆಲ ಬಿರಿಯೆ ಉದಧಿಗಳು ತುಳುಕಾಡೆ ಅಘಟರಿಬ್ಬರು ಹೋರಾಡಿದರು.

ಶರಾವತೀಗಾನಿ